www.janavaadi.in

# ಜನವಾದಿ

ರಾಯಚೂರು
ಕಲಬುರಗಿ
ಯಾದಗಿರಿ
ಕೊಪ್ಪಳ
ಬಳ್ಳಾರಿ
ಬೀದರ್

ಸಂಪಾದಕ : ಬಸವರಾಜ ಹೆಚ್
Editor : Basavaraj H

ಜನರ ಅಂತರಂಗದ ಧ್ವನಿ
ಕನ್ನಡ ದಿನಪತ್ರಿಕೆ

JANAVAADI
Kannada Daily News Paper

## ಸಿಂಧೂರ ಅಳಿಸಿದವರನ್ನು ಮಣ್ಣಲ್ಲಿ ಮುಚ್ಚಿದ್ದೇವೆ : ಪ್ರಧಾನಿ ಮೋದಿ

ಬಿಕನೇರ್ ಮೇ 22– ಜಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ನರಮೇಧಕ್ಕೆ ಪ್ರತೀಕಾರವಾಗಿ ಭಾರತೀಯ ಸೇನಾ ಪಡೆ ನಡೆಸಿದ ಆಪರೇಷನ್ ಸಿಂಧೂರ್ ಕಾರ್ಯಾಚರಣೆಯಲ್ಲಿ ಕೇವಲ 22 ನಿಮಿಷದಲ್ಲಿ ಸೇಡು ತೀರಿಸಿಕೊಂಡಿದ್ದೇವೆ ಎಂದು ಪ್ರಧಾನಿ ನರೇಂದ್ರಮೋದಿ ಕೊಂಡಾಡಿದ್ದಾರೆ.

ಪಾಕಿಸ್ತಾನ ಹಾಗೂ ಪಿಓಕೆ ಮೇಲೆ ನಡೆದ ಆಪರೇಷನ್ ಸಿಂಧೂರ್ ನಂತರ ರಾಜಸ್ಥಾನದ ಬಿಕನೇರ್‌ನಲ್ಲಿ ಮಾತನಾಡಿದ ಮೋದಿ ಅವರು, ಏ.22ರ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಭಾರತವು 22 ನಿಮಿಷದಲ್ಲೇ ಸೇಡು ತೀರಿಸಿಕೊಂಡಿದೆ. ಇದು ನಮ ಸೇನಾ ಪಡೆಯ ತಾಕತ್ತು ಎಂದು ಬಣ್ಣಿಸಿದರು.

ಏ.22ರ ದಾಳಿಗೆ ಪ್ರತಿಯಾಗಿ ನಾವು ಭಯೋತ್ಪಾದಕರ 9 ಅಡಗುತಾಣಗಳನ್ನು 22 ನಿಮಿಷದಲ್ಲಿ ನಾಶಪಡಿಸಿದೆವು. ಸಿಂಧೂರವು ಪುಡಿಯಾಗಿ ಬದಲಾದರೆ ಏನಾಗುತ್ತದೆ ಎಂಬುದಕ್ಕೆ ವಿಶ್ವಕ್ಕೆ ಮತ್ತು ನಮ ಶತ್ರುಗಳಿಗೆ ತೋರಿಸಿದ್ದೇವೆ ಎಂದು ಸೇನಾಪಡೆಯ ಕಾರ್ಯಾಚರಣೆ ಬಗ್ಗೆ ಕೊಂಡಾಡಿದರು.

ನನ್ನ ರಕ್ತನಾಳಗಳಲ್ಲಿ ಕುದಿಯುತ್ತಿರುವುದು ರಕ್ತವಲ್ಲ. ಅದು ಸಿಂಧೂರ ಎಂದು ಮೋದಿ ಹೇಳುತ್ತಿದ್ದಂತೆ ಜನಸ್ತೋಮದಿಂದ ಮೋದಿ.. ಮೋದಿ.. ಎಂಬ ಜೈಕಾರದ ಘೋಷಣೆಗಳು ಮೊಳಗಿದವು.

ಸಂಪುಟ : 11 ಸಂಚಿಕೆ : 277 ಪುಟ:4 ರಾಯಚೂರು ಶುಕ್ರವಾರ 23–05–2025 RNI NO.KARKAN/2012/56428 ಮೊಬೈಲ್: 9448300139,9449711232. e-mail : janavaadi@gmail.com ಬೆಲೆ : 2 ರೂ.
VOLUME : 11 ISSUE : 277 PAGES : 4 RAICHUR FRIDAY 23-05-2025 RNI NO.KARKAN/2012/56428 MOBILE:9448300139,9449711232. E-MAIL:janavaadi@gmail.com PRICE : 2 RS.

### ರಾಯಚೂರು ಪೇಟೆ ದರ

| | |
|---|---|
| **ಸಣ್ಣ ಭತ್ತ(ಸೋನಾ)** | |
| ಕನಿಷ್ಟ | 1889 |
| ಗರಿಷ್ಠ | 2289 |
| **ಒಣಕಡಲೆ** | |
| ಕನಿಷ್ಟ | 5111 |
| ಗರಿಷ್ಠ | 5761 |
| **ಕೆಂಪು ತೊಗರಿ** | |
| ಕನಿಷ್ಟ | 6889 |
| ಗರಿಷ್ಠ | 7109 |
| **ಶೇಂಗಾ (ಗುಂಗ್ರು)** | |
| ಕನಿಷ್ಟ | 3685 |
| ಗರಿಷ್ಠ | 5572 |
| **ಸೂರ್ಯಕಾಂತಿ** | |
| ಕನಿಷ್ಟ | – |
| ಗರಿಷ್ಠ | – |
| **ಈರುಳ್ಳಿ** | |
| ಕನಿಷ್ಟ | – |
| ಗರಿಷ್ಠ | – |

# ಸಚಿವ ಸಂಪುಟ ಸಭೆಯಲ್ಲಿ ಜಾತಿಗಣತಿ ಕುರಿತ ಚರ್ಚೆ ಅಪೂರ್ಣವಾಗಿದೆ: ಹೆಚ್.ಕೆ.ಪಾಟೀಲ್

ಬೆಂಗಳೂರು ಮೇ 22– "ಜಾತಿಗಣತಿ ಬಗ್ಗೆ ಚರ್ಚೆ ಅಪೂರ್ಣವಾಗಿದೆ. ಬಹುತೇಕ ಸಚಿವರು ಲಿಖಿತ ಅಭಿಪ್ರಾಯ ನೀಡಿದ್ದಾರೆ. ಕೆಲವರು ಕೊಡಬೇಕಿದೆ. ಈ ಬಗ್ಗೆ ಚರ್ಚೆಯಾದ ಮೇಲೆ ತೀರ್ಮಾನ ಮಾಡುತ್ತೇವೆ" ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದ್ದಾರೆ.

ಇಂದು ಸಚಿವ ಸಂಪುಟ ಸಭೆಯ ನಂತರ ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, "ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ–2015ರ ದತ್ತಾಂಶಗಳ ಅಧ್ಯಯನ ವರದಿ–2024ರಲ್ಲಿ ಮಾಡಿರುವ ಶಿಫಾರಸುಗಳ ಬಗ್ಗೆ ಇನ್ನೂ ಕೆಲ ಸಚಿವರು ಉತ್ತರ ನೀಡಬೇಕಿದೆ. ಹಾಗಾಗಿ, ಇದರ ಚರ್ಚೆಯನ್ನು ಮುಂದೂಡಲಾಗಿದೆ" ಎಂದು ಹೇಳಿದರು.



ಕೆಪಿಎಸ್‌ಸಿ 2011ರ ನೇಮಕಾತಿಯಲ್ಲಿ ಅಕ್ರಮ ವಿಚಾರ ಕುರಿತು ಮಾತನಾಡಿ, "ಸಚಿವ ಸಂಪುಟ ಸಭೆಯಲ್ಲಿ ಈ ಸಂಬಂಧ ಚರ್ಚೆಯಾಗಿದ್ದು ಅಂದಿನ ಅಧ್ಯಕ್ಷರು, ಸದಸ್ಯರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಒಪ್ಪಿಸದಿರಲು ತೀರ್ಮಾನ ಮಾಡಲಾಗಿದೆ. ಈ ವಿಷಯವನ್ನು ಮುಕ್ತಾಯಗೊಳಿಸಲು ಸಚಿವ ಸಂಪುಟ ತೀರ್ಮಾನಿಸಿದೆ" ಎಂದು ಹೇಳಿದರು.

"ವಿಧಾನಸಭೆ ಅಧಿವೇಶನದಲ್ಲಿ ಅವಮಾನತುಗೊಂಡ ಬಿಜೆಪಿ ಶಾಸಕರ ಬಗ್ಗೆ ಚರ್ಚೆ ನಡೆಯಿತು. ಮುಖ್ಯಮಂತ್ರಿಗಳು ಈ ವಿಷಯ ಪ್ರಸ್ತಾಪಿಸಿದ್ರು. ಈ ವಿಚಾರದಲ್ಲಿ ಸಭಾಧ್ಯಕ್ಷರ ಜೊತೆ ಚರ್ಚೆ ಮಾಡಲು ಸಿಎಂಗೆ ಅಧಿಕಾರ ನೀಡಲಾಗಿದೆ. ಮೇ 25ರ ಸಂಜೆ 5 ಗಂಟೆಗೆ ಸಭೆ ನಡೆಸಲು ತೀರ್ಮಾನ ಮಾಡಲಾಗಿದ್ದು ಸಭಾಧ್ಯಕ್ಷರು, ಸಿಎಂ ಹಾಗೂ ಪ್ರತಿಪಕ್ಷದ ನಾಯಕರು ನನ್ನ ಜೊತೆ ಮಾತನಾಡಿದ್ದಾರೆ. ಈ ಸಂಬಂಧ ಸದನ ಸಲಹಾ ಸಭೆ ನಡೆಸಲು ತೀರ್ಮಾನವಾಗಿದ್ದು, ಸಭಾಧ್ಯಕ್ಷರು ಸೂಚಿಸುವ ಸದಸ್ಯರ ಜೊತೆ ಸಭೆ ನಡೆಯಲಿದೆ" ಎಂದು ತಿಳಿಸಿದರು.

ಸಚಿವ ಸಂಪುಟ ಸಭೆಯ ಇತರ ನಿರ್ಣಯಗಳು: ಬೆಂಗಳೂರು ಮೆಟ್ರೋ ರೈಲು ಹಂತ–2 ಯೋಜನೆಯ 40,425.02 ಕೋಟಿ ರೂ.ಗಳ ಪರಿಷ್ಕೃತ ಅಂದಾಜಿಗೆ ಅನುಮೋದನೆ ನೀಡಲಾಗಿದೆ. ಭರತ್ ಲಾಲ್ ಮೀನಾ, ನಿವೃತ್ತ ಐಎಎಸ್ ಅಧಿಕಾರಿ, ಅಂದಿನ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಪಿ.ಬಿ.ರಾಮಮೂರ್ತಿ, ನಿವೃತ್ತ ಐಎಎಸ್ ಅಧಿಕಾರಿ, ಅಂದಿನ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರುಗಳ ವಿರುದ್ಧ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3)ರಡಿ ಇಲಾಖಾ ವಿಚಾರಣೆಗೆ ವಹಿಸಲು ಮಾಡಿರುವ ಶಿಫಾರಸುನ್ನು ಕೈಬಿಡುವ ಬಗ್ಗೆ ತೀರ್ಮಾನ.

ಅನಿಲ್ ಕುಮಾರ್ ವೈ.ಡಿ. ಸಹಾಯಕ ಇಂಜಿನಿಯರ್ ಮತ್ತು ಮಹಾದೇವ ಬಿ.ಕೆ., ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ಇವರುಗಳ ವಿರುದ್ಧ ಉಪ ಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3)ರಡಿ ಇಲಾಖಾ ವಿಚಾರಣೆಗೆ ವಹಿಸಲು ಮಾಡಿರುವ ಶಿಫಾರಸುನ್ನು ಕೈಬಿಡುವ ಬಗ್ಗೆ ತೀರ್ಮಾನ ಮಾಡಲಾಗಿದೆ.

"ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ವಿಧೇಯಕ, 2025" ಅನುಮೋದನೆ. ಕರ್ನಾಟಕ ಗೃಹ ಮಂಡಳಿಯು ಬೆಂಗಳೂರು ನಗರ, ಕೆಂಗೇರಿ ಬಂಡೇಮಠ ಬಡಾವಣೆಯಲ್ಲಿ ಬಹುಮಹಡಿ ವಸತಿ ಸಮುಚ್ಚಯಗಳನ್ನು ನಿರ್ಮಿಸುವ ಅಂದಾಜು 2,180 ಮೊತ್ತದ ಕೋಟಿಗಳ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಮತ್ತು ನಂದಗುಡಿ ಹೋಬಳಿಗಳ 59 ಕೆರೆಗಳಿಗೆ ಹೆಚ್.ಎನ್.ವ್ಯಾಲಿ ಯೋಜನೆಯಿಂದ (ಹೆಚ್ಚುವರಿ ವಿಸ್ತರಣೆ ಮೂಲಕ) ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ತುಂಬಿಸುವ 140 ಕೋಟಿ ರೂ.ಗಳ ಅಂದಾಜು ಮೊತ್ತದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕಿನ ಕೊಡಿಗೇನಹಳ್ಳಿ ಹೋಬಳಿ ಮುದ್ದೇನಹಳ್ಳಿ ಶಾನಗಾನಹಳ್ಳಿ ನಡುವೆ ಜಯಮಂಗಲಿ ನದಿಗೆ ಅಡ್ಡಲಾಗಿ ಚೆಕ್‌ಡ್ಯಾಂ ಕಂ ಬ್ರಿಡ್ಜ್ ನಿರ್ಮಾಣ ಕಾಮಗಾರಿಯನ್ನು 18.50 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಕೋಲಾರ ಜಿಲ್ಲೆಯ ಮಾಲೂರು 25 ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ತೀರ್ಮಾನ. ಮಂಡ್ಯ ಜಿಲ್ಲೆಯ ಮದ್ದೂರು ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಅನುಮೋದನೆ ದೊರೆತಿದೆ.

ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕಿನ ರಾಜಪರಮೇಶ್ವರಿ ನಾಲೆ ಮತ್ತು ಹಾರೋಹಳ್ಳಿ ಮೇಲ್ದಂಡೆ ನಾಲೆಯಡಿಯಲ್ಲಿ ಬರುವ ಉದ್ದೀನಾಲೆ ಮತ್ತು ಮೈನರ್‌ಳಿಗೆ ಆರ್‌ಸಿಸಿ ಟ್ರಫ್ ನಿರ್ಮಾಣ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ರೂ. 45 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕಿನ 25

☛4

### ರಾಯಚೂರು ಜಿಲ್ಲೆ
ಇಂದಿನ ಹವಾಮಾನ ಮುನ್ಸೂಚನೆ

ಗರಿಷ್ಟ : 31 ಸೆಲ್ಸಿಯಸ್
ಕನಿಷ್ಟ : 24 ಸೆಲ್ಸಿಯಸ್

## ಜೆಸ್ಕಾಂ: ಇಂದು ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

ರಾಯಚೂರು ಮೇ 22 – ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆಯ ಉಪ ವಿಭಾಗ–1ರ 11 ಕೆವಿ ಮಾರ್ಗ ಹಾಗೂ ಜಿ.ಓ.ಎಸ್ ಕಾಮಗಾರಿ ನಿರ್ವಹಿಸುತ್ತಿರುವ ಪ್ರಯುಕ್ತ ಮೇ.23ರ ಬೆಳಿಗ್ಗೆ 11ಗಂಟೆಯಿಂದ ಮಾಧ್ಯಾಹ್ನ 2ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.

ಅಂದು ಬೆಳಿಗ್ಗೆ ಸ್ಟೇಷನ್‌ಏರಿಯಾ, ಗುಡ್‌ಶೆಡ್ ಏರಿಯಾ, ಆಶಾಪೂರು ಸರ್ಕಲ್, ಕೆ.ಕೆ.ರೆಡ್ಡಿ ಫಂಕ್ಷನ್ ಹಾಲ್, ಎಫ್.ಸಿ.ಐ ಗೋಡಾನ್, ಅಮರೇಶ್ವರ ಕಾಲೋನಿ, ಆರ್.ಆರ್ ಕಾಲೋನಿ, ಪದ್ಮಾವತಿ ಕಾಲೋನಿ, ರಾಜಮಾತಗುಡಿ, ಆಫಿಸರ್ಸ್ ಕಾಲೋನಿ, ಇಂಜಿನೀಯರ್ಸ್ ಕಾಲೋನಿ, ಪವನ್ ಲೇಔಟ್, ರಾಯಲ್ ಫೋರ್ಟ್, ಬಿ.ಸಿ.ಎಮ್ ಹಾಸ್ಟಲ್, ರಾಧಕೃಷ್ಣ ಫಂಕ್ಷನ್ ಹಾಲ್ ಸೇರಿದಂತೆ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ–1ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಲಂಚ ಪಡೆದ ಅಧಿಕಾರಿಯನ್ನು ಉಳಿಸಲು ಕುತಂತ್ರ; ಅಲ್ತಾಫ್ ರಂಗಮಿತ್ರ ಆರೋಪ



ಜನವಾದಿ ವಾರ್ತೆ

ರಾಯಚೂರು ಮೇ 22– ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಹೊರಗುತ್ತಿಗೆ ಕೆಲಸ ಮಾಡುತ್ತಿದ್ದ ಸಿದ್ದಪ್ಪ ಮತ್ತು ಶ್ರೀದೇವಿ ಇವರು ಕಲಾವಿದರಿಂದ ಇಲಾಖೆಯ ಧನ ಸಹಾಯ ಪಡೆಯಲು 15 ಲಕ್ಷ ರೂ ಲಂಚ ಪಡೆದಿರುವ ಕುರಿತು ಹಿಂದಿನ ಸಹಾಯಕ ನಿರ್ದೇಶಕಿ ಮಂಗಳಾ ನಾಯಕ ಅವರು ವರ್ಗಾವಣೆ ಪೂರ್ವದಲ್ಲಿ ಡಿಸಿಗೆ ಪತ್ರ ಬರದ ಬಳಿಕ ಇವರನ್ನು ಅಮಾನತ್ತು ಮಾಡಿದ್ದು, ಇದೀಗ ಯಾದಗಿರಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರಭಾರಿ ವಹಿಸಿಕೊಂಡ ತಕ್ಷಣದಲ್ಲಿ ಸುಳ್ಳು ಆರೋಪವೆಂದು ಹೇಳಿ ಕಾರ್ಮಿಕ ಇಲಾಖೆಯಿಂದ ಬಾಕಿ ವೇತನ ಪಾವತಿಗೆ ಸೂಚಿಸಿದ್ದು,

☛4

## ಎಸ್‌ಎಸ್‌ಎಲ್‌ಸಿ ಪರೀಕ್ಷೆ–2ರ ಪೂರ್ವಭಾವಿ ಸಭೆ
# ಪರೀಕ್ಷೆ ಸುಗಮವಾಗಿ ನಡೆಸಲು ಅಪರ ಜಿಲ್ಲಾಧಿಕಾರಿಗಳ ಸೂಚನೆ

ಜನವಾದಿ ವಾರ್ತೆ

ರಾಯಚೂರು ಮೇ 22– ಜಿಲ್ಲೆಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ–2 ಮೇ.26 ರಿಂದ ಜೂನ್ 2 ರವರೆಗೆ ನಡೆಯಲಿದ್ದು, ಪರೀಕ್ಷೆಯು ಯಾವುದೇ ಲೋಪದೋಷವಿಲ್ಲದೆ ಸುಗಮವಾಗಿ ನಡೆಸುವಂತೆ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನ ನೀಡಿದರು.

ಮೇ 21ರ ಬುಧವಾರ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ–2ರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಜಿಲ್ಲೆಯಲ್ಲಿ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆ–1ರಲ್ಲಿ ಅನುತ್ತೀರ್ಣರಾದ ಒಟ್ಟು 16,058 ವಿದ್ಯಾರ್ಥಿಗಳು ಪರೀಕ್ಷೆ–2 ಬರೆಯಲು ಹೆಸರು ನೋಂದಾಯಿಸಿದ್ದಾರೆ. ಪ್ರತಿಯೊಂದು ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಟಿವಿಗಳನ್ನು ಅಳವಡಿಸಲಾಗಿದೆ ಹಾಗೂ ಜಿಲ್ಲಾ ಹಂತದ ವೆಬ್ ಕಾಸ್ಟಿಂಗ್ ಮಾಡಿ ವೀಕ್ಷಿಸಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಬ್ಲಾಕ್ ಹಂತದಲ್ಲಿ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಕೊಠಡಿ ಮೇಲ್ವಿಚಾರಕರನ್ನು ನೇಮಿಸಿದ್ದು, ಪ್ರತಿ ಬ್ಲಾಕ್‌ಗಳಿಗೆ ಓರ್ವ ಬ್ಲಾಕ್ ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿಗಳನ್ನು ಸಹ ನೇಮಕ ಮಾಡಿಕೊಳ್ಳಲಾಗಿದೆ ಎಂದರು.

ಪರೀಕ್ಷಾ ಕೇಂದ್ರಗಳಲ್ಲಿ ಮೊಬೈಲ್‌ಗಳನ್ನು ಕಡ್ಡಾಯವಾಗಿ ನಿಷೇಧಿಸಲಾಗಿದ್ದು, ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಹಾಗೂ ಪರೀಕ್ಷಾ ಕೇಂದ್ರಗಳ ಹತ್ತಿರದಲ್ಲಿರುವ ಜೆರಾಕ್ಸ್ ಮತ್ತು ಸೈಬರ್ ಕೇಂದ್ರಗಳನ್ನು ಪರೀಕ್ಷೆ ಸಮಯದಲ್ಲಿ ಮುಚ್ಚಿಸಲು ಆದೇಶ ಹೊರಡಿಸಿ ಬಿಗಿ ಬಂದೋಬಸ್ತ್ ಮಾಡಲಾಗಿದೆ ಎಂದರು.

ಜಿಲ್ಲೆಯಲ್ಲಿ 51 ಪರೀಕ್ಷೆ ಕೇಂದ್ರಗಳು: ಪರೀಕ್ಷೆಯು ಜಿಲ್ಲೆಯ ವಿವಿಧ ತಾಲೂಕುಗಳಾದ ದೇವದುರ್ಗ 08, ಲಿಂಗಸೂಗೂರು 11,

☛4

# ಜೋಳ ಖರೀದಿಗೆ ಆಗ್ರಹಿಸಿ ತಹಶೀಲ್ದಾರ ಕಚೇರಿಗೆ ಹೋಗುವ ರಸ್ತೆಗೆ ಲಾರಿ ನಿಲ್ಲಿಸಿ ಪ್ರತಿಭಟನೆ

ಜನವಾದಿ ವಾರ್ತೆ

ಸಿಂಧನೂರು ಮೇ 22 – ಹಿಂಗಾರು ಹಂಗಾಮಿನ ಸಂಪೂರ್ಣ ಜೋಳ ಖರೀದಿ ಹಾಗೂ ಸೆಂಟ್ರಲ್ ವೇರ್ ಹೌಸ್ (ಸಿಡಬ್ಲ್ಯೂಸಿ) ನಡೆ ಖಂಡಿಸಿ ರೈತರು ಗುರುವಾರ ಮಧ್ಯಾಹ್ನ ಜೋಳ ತುಂಬಿದ ಲಾರಿಯನ್ನು ತಹಸೀಲ್ದಾರ ಕಚೇರಿಗೆ ತೆರಳುವ ದಾರಿಗೆ ಅಡ್ಡ ನಿಲ್ಲಿಸಿ ದಿಢೀರ್ ಪ್ರತಿಭಟನೆ ನಡೆಸಿದರು.



ರಾಜ್ಯ ಸರ್ಕಾರದಿಂದ ನಿಗದಿಗೊಳಿಸಿದ್ದ 10 ಲಕ್ಷ ಕ್ವಿಂಟಲ್ ಜೋಳ ಸಂಪೂರ್ಣ ಖರೀದಿಯಾಗಿ, ತಂತ್ರಾಂಶದಲ್ಲಿ ಖರೀದಿ ಬಂದ್ ಮಾಡಿದ್ದು, ಕಳೆದೊಂದು ವಾರದಿಂದ ಜೋಳ ಖರೀದಿ ಬಂದ್ ಮಾಡಲಾಗಿದೆ. ತಾಲ್ಲೂಕಿನಲ್ಲಿ ಹಿಂಗಾರು ಹಂಗಾಮಿನಲ್ಲಿ ನೊಂದಣಿಯಾದ 1.5 ಲಕ್ಷ ಕ್ವಿಂಟಲ್ ಜೋಳ ಖರೀದಿ ಬಾಕಿ ಇದೆ. ವಲ್ಕಂದಿನ್ನಿ ವಿಎಸ್‌ಎಸ್‌ಎನ್ ಸೊಸೈಟಿಯಿಂದ ರೈತರಿಂದ ಖರೀದಿ ಮಾಡಿದ ಜೋಳ ತುಂಬಿದ ಲಾರಿ, ಸಿಡಬ್ಲ್ಯೂಸಿ ಗ್ರೇಡರ್‌ಗಳು ಗುಣಮಟ್ಟ ಸರಿ ಇಲ್ಲವೆಂದು

☛4

## ದೈವ ಶಕ್ತಿ ಇರೋವರೆಗೆ ಯಾರು ನನ್ನನ್ನು ಕಾಡೋಕೆ ಆಗಲ್ಲ –ಹೆಚ್.ಡಿ ರೇವಣ್ಣ

ಜನವಾದಿ ವಾರ್ತೆ

ರಾಯಚೂರು ಮೇ 22– ನನಗೆ ಯಾವ ಶಕ್ತಿಯೂ ಕಾಡ್ತಿಲ್ಲ, ದೈವ ಶಕ್ತಿ ಹಾಗೂ ಜನಶಕ್ತಿ ಇರೋವರೆಗೆ ಯಾರು ನನ್ನನ್ನು ಕಾಡಲು ಆಗುವುದಿಲ್ಲ ಎಂದು ಮಾಜಿ ಸಚಿವ ಹೆಚ್.ಡಿ ರೇವಣ್ಣ ಹೇಳಿದ್ದಾರೆ.



ಅವರಿಂದು ಮಂತ್ರಾಲಯಕ್ಕೆ ಹೊರಟಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದರು. ಈ ವೇಳೆ, ಕೆಲ ಶಕ್ತಿಗಳನ್ನು ದಮನ ಮಾಡಬೇಕು ಎಂದರೆ ದೇವರ ಹತ್ರ ಹೋಗಬೇಕಲ್ವ, ಆ ಕೆಲಸ ಮಾಡ್ತಿದಿನಿ. ನಾನು ದೇವಸ್ಥಾನಕ್ಕೆ ಸಾಮಾನ್ಯವಾಗಿ ಹೋಗುತ್ತೇನೆ. ಹಾಗಾಗಿ ಮಂತ್ರಾಲಯಕ್ಕೆ ಹೋಗಲು ಬಂದಿದ್ದೇನೆ. ಮೊನ್ನೆ ತಿರುಪತಿಗೆ ಹೋಗಿದ್ದೆ ನಮ್ಮ ತಂದೆ ಜೊತೆ. ಶೃಂಗೇರಿಗೂ ಹೋಗಿದ್ದೆ ಎಂದಿದ್ದಾರೆ.

ಪ್ರಸ್ತುತ ರಾಜಕೀಯ ಬೆಳವಣಿಗೆಗಳ ಬಗ್ಗೆ ಏನನ್ನೂ ಹೇಳುವ ಶಕ್ತಿ ಇಲ್ಲ. ಕಾಂಗ್ರೆಸ್‌ಗೆ ರಾಜ್ಯದ ಜನತೆ ಐದು ವರ್ಷ ಅಧಿಕಾರ ಕೊಟ್ಟಿದ್ದಾರೆ. ಏನು ಮಾಡ್ತಾರೆ ಅಂತ ನೋಡೋಣ, ಈಗಾಗ್ಲೆ ಐದನೇ ಗ್ಯಾರಂಟಿ, ಆರನೇ ಗ್ಯಾರಂಟಿ, ಏಳನೇ ಗ್ಯಾರಂಟಿ ಅಂತ ಹೇಳ್ತಿದ್ದಾರೆ. ಮಳೆಯಿಂದ ಬೆಳೆ ಹಲವೆಡೆ ನಾಶ ಆಗಿದೆ, ಸರ್ಕಾರ ಬೆಳೆ ಪರಿಹಾರ ಕೊಡಬೇಕು ಎಂದು ಆಗ್ರಹಿಸಿದರು.

ಬೆಂಗಳೂರಿನಲ್ಲಿ ಮಳೆ ಅವಾಂತರ ಲೆಕ್ಕಿಸದೇ ಕಾಂಗ್ರೆಸ್ ಸಮಾವೇಶ ನಡೆಸಿದೆ. ಈ ವಿಚಾರವನ್ನು ರಾಜ್ಯದ ಜನತೆಗೆ ಬಿಡ್ತೀವಿ, ಸರ್ಕಾರ ಎರಡು ವರ್ಷ ಏನು ಕೆಲಸ ಮಾಡಿದೆ ಅನ್ನೋದನ್ನ ರಾಜ್ಯದ ಜನತೆ ನಿರ್ಧಾರ ಮಾಡ್ತಾರೆ. ಕಾಲವೇ ಇದನ್ನೆಲ್ಲ ನಿರ್ಧರಿಸುತ್ತೆ. ಇನ್ನೂ, ಗೃಹಲಕ್ಷ್ಮೀ ಹಣದ ವಿಚಾರವಾಗಿ ಡಿಸಿಎಂ ಡಿ.ಕೆ ಶಿವಕುಮಾರ ಹೇಳಿಕೆ ವಿಚಾರವಾಗಿ, ಅವರ ಬಗ್ಗೆ ರಿಯಾಕ್ಟ್ ಮಾಡೋಕೆ ನನ್ನಲ್ಲಿ ಶಕ್ತಿ ಇಲ್ಲ ಎಂದಿದ್ದಾರೆ.

## ರೈತರು ಬೆಳದ ಜೋಳವನ್ನು ಖರೀದಿ ಕೇಂದ್ರಗಳಲ್ಲಿ ಖರೀದಿಸುವಂತೆ ಒತ್ತಾಯಿಸಿ
# ರಾಜ್ಯ ಹೆದ್ದಾರಿಯಲ್ಲಿ 4 ಗಂಟೆ ಕಾಲ ರೈತರಿಂದ ರಸ್ತೆ ತಡೆ ನಡೆಸಿ ಪ್ರತಿಭಟನೆ

ಜನವಾದಿ ವಾರ್ತೆ

ಮಾನ್ವಿ ಮೇ 22– ಪಟ್ಟಣದ ಬಸವ ವೃತ್ತದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ರೈತರು ಬೆಳದ ಜೋಳವನ್ನು ಜೋಳ ಖರೀದಿ ಕೇಂದ್ರಗಳಲ್ಲಿ ಜೋಳ ಖರೀದಿ ಮಾಡುವುದನ್ನು ನಿಲ್ಲಿಸಿರುವುದನ್ನು ವಿರೋಧಿಸಿ ರೈತರ ಜೋಳವನ್ನು ಖರೀದಿ ಮಾಡುವಂತೆ ಒತ್ತಾಯಿಸಿ ರೈತರು 4 ಗಂಟೆಗೂ ಹೆಚ್ಚು ಕಾಲ ರಾಯಚೂರು ಸಿಂಧನೂರು ರಸ್ತೆಯಲ್ಲಿ ಜೋಳದ ಟ್ರಾಕ್ಟರ್ ಗಳನ್ನು





ರಸ್ತೆಗೆ ಅಡ್ಡಲಾಗಿ ನಿಲ್ಲಿಸಿ ರಸ್ತೆಯಲ್ಲಿ ಜೋಳವನ್ನು ಹಾಕಿ ಪ್ರತಿಭಟನೆ ನಡೆಸಿದರಿಂದ ಹೆದ್ದಾರಿಯಲ್ಲಿ ವಾಹನ ಸಂಚಾರ ಸ್ಥಗಿತ ಗೊಂಡು ನಾಲ್ಕು ಕಿ,ಮಿ.ವರೆಗೂ ವಾಹನಗಳು ನಿಂತಿ–ದರಿಂದ ಪ್ರಯಾಣಿಕರಿಗೆ ತೊಂದರೆ ಉಂಟಾಯಿತು.

ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಆಹಾರ ಮತ್ತು ನಾಗರಿಕ ಸರಬರಾಜು ಉಪನಿರ್ದೇಶಕರಾದ ಕೃಷ್ಣ ರವರಿಗೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಗೌರವಧ್ಯಾಕ್ಷರಾದ ಚಾಮರಸ ಮಾಲಿಪಾಟೀಲ್ ಮನವಿ ಸಲ್ಲಿಸಿ ಮಾತನಾಡಿ ಮಾನ್ವಿ ಭಾಗದ ರೈತರು ಮುಂಗಾರು ಹಂಗಾಮಿನಲ್ಲಿ ಬೆಳೆದ ಜೋಳವನ್ನು ಸರ್ಕಾರದ ಕನಿಷ್ಟ ಬೆಂಬಲ ಬೆಲೆ ಅಡಿಯಲ್ಲಿ ಮಾರಾಟ ಮಾಡುವುದಕ್ಕೆ ಮಾನ್ವಿ ಪಟ್ಟಣದ ಟಿ.ಎ.ಪಿ.ಸಿ.ಎಂ.ಎಸ್. ಜೋಳ ಖರೀದಿ ಕೇಂದ್ರದಲ್ಲಿ 5 ತಿಂಗಳ ಕೆಳಗೆ 1510 ರೈತರು ನೊಂದಾಯಿಸಿಕೊಂಡಿದ್ದು ಇನ್ನೂ 341 ಕ್ಕೂ ಹೆಚ್ಚು ರೈತರು ಬೆಳೆದ ಜೋಳ ಖರೀದಿ ಮಾಡುವುದು ಬಾಕಿ ಇದೆ ಅದ್ದರೆ ರೈತರ ಗಮನಕ್ಕೆ ತರದೆ ಮೇ.16 ರಿಂದ ಜೋಳ ಖರೀದಿ ಕೇಂದ್ರದಲ್ಲಿ ಜೋಳ ಖರೀದಿಯನ್ನು ಸ್ಥಗಿತಗೊಳ್ಳಿಸಿರುವುದ–ರಿಂದ ಟಿ.ಎ.ಪಿ.ಸಿ.ಎಂ.ಎಸ್. ಜೋಳ ಖರೀದಿ ಕೇಂದ್ರದಲ್ಲಿ ರೈತರು ಟ್ರಾಕ್ಟರ್ ಗಳಲ್ಲಿ ಜೋಳವನ್ನು ಮಾರಾಟಕ್ಕೆಂದು ಹತ್ತು ದಿನಗಳಿಂದ ಪ್ರತಿದಿನ ತಮ್ಮ ಸಾಲಿಗಾಗಿ ಕಾಯುತ್ತಿದ್ದು ತಂದು ಹತ್ತು ದಿನಗಳು ಕಳೆದಿದ್ದು ಈಗ ಜೋಳವನ್ನು ಖರೀದಿ ಮಾಡದೆ ಇದ್ದಲ್ಲಿ ರೈತರಿಗೆ ಟ್ರಾಕ್ಟರ್ ಬಾಡಿಗೆ ನಷ್ಟವಾಗುತ್ತದೆ ತಾಲೂಕಿನಲ್ಲಿ ಜೋಳ ಖರೀದಿ ಕೇಂದ್ರದಿಂದ ಜೋಳ ಖರೀದಿಯಲ್ಲಿ ರೈತರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಅನೇಕ ಬಾರಿ

☛4

# ಅಭಿವೃದ್ಧಿ ಬಗ್ಗೆ ಅಂಕಿ ಸಂಖ್ಯೆಯೊಂದಿಗೆ ಚರ್ಚೆಗೆ ಸಿದ್ಧ – ಮಾಜಿ ಶಾಸಕ ಹೂಲಗೇರಿ

ಜನವಾದಿ ವಾರ್ತೆ




ಲಿಂಗಸೂಗೂರು ಮೇ 22– ಸ್ಥಳೀಯ ಶಾಸಕರು ಅಭಿವೃದ್ಧಿ ಬಗ್ಗೆ ಮಾಹಿತಿ ಪಡೆದು ಮಾತನಾಡಬೇಕು, ಶೂನ್ಯ ಸಾಧನೆ ಎಂದು ಸರ್ಕಾರದ ಮೇಲೆ ಸುಳ್ಳು ಆರೋಪ ಮಾಡುವ ಮೊದಲು ರಾಜ್ಯದಲ್ಲಿ ಮತ್ತು ಕ್ಷೇತ್ರದಲ್ಲಿ ಆಗಿರುವ ಕೆಲಸಗಳ ಬಗ್ಗೆ ಅರಿತುಕೊಳ್ಳಬೇಕು ಎಂದು ಮಾಜಿ ಶಾಸಕ ಡಿ ಎಸ್ ಹೂಲಗೇರಿ ಹೇಳಿದರು.

ಪಟ್ಟಣದ ಪತ್ರಿಕಾ ಭವನದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಲಿಂಗಸೂಗೂರು ಕ್ಷೇತ್ರದ ಶಾಸಕರು ಸರ್ಕಾರದ ಸಾಧನೆ ಶೂನ್ಯ ಸಾಧನೆ ಎಂದು ಎಂದು ಹೇಳಿದ್ದಾರೆ, ರಾಜ್ಯ ಸರ್ಕಾರವು ಕ್ಷೇತ್ರದಲ್ಲಿ ಗೃಹಲಕ್ಷ್ಮೀ 63,453 ಫಲಾನುಭವಿಗಳಿಗೆ ಎಪ್ರಿಲ್ 2025 ರವರೆಗೆ ಗೃಹಲಕ್ಷ್ಮೀ ಕಂತುಗಳು ಜಮಾವಾಗಿವೆ.ಗೃಹ ಜ್ಯೋತಿ 51,611 ಮನೆಗಳ ಎಪ್ರಿಲ್ ವರೆಗೆ 200 ಯುನೀಟ್ ಉಚಿತ ನೀಡಲಾಗಿದೆ.

ಯುವ ನಿಧಿ 1,726 ವಿದ್ಯಾರ್ಥಿಗಳಿಗೆ ಫೆಬ್ರುವರಿ ವರೆಗೆ ನೀಡಲಾಗಿವೆ.ಶಕ್ತಿ ಯೋಜನೆ 1,73,77,638 ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದಾರೆ.

ಅನ್ನಭಾಗ್ಯ 3,35,935 ಕುಟುಂಬ ಸದಸ್ಯರು ಯೋಜನೆಯ ಸದುಪಯೋಗ ಪಡೆಯುತ್ತಿದ್ದಾರೆ. ಎಪ್ರಿಲ್ 2025 ರವರೆಗೆ ಉಚಿತ ಪ್ರತಿ ವ್ಯಕ್ತಿಗೆ 10 ಕೆಜಿ ಯಂತೆ ನ್ಯಾಯಬೆಲೆ ಅಂಗಡಿಯಲ್ಲಿ ಅಕ್ಕಿಯನ್ನು ವಿತರಣೆ ಮಾಡಲಾಗಿದೆ. ಆದರು ಶಾಸಕರು ಶೂನ್ಯ ಸಾಧನೆ ಎಂದು ಹೇಳಿರುವುದು ಅವರಿಗೆ ಮಾಹಿತಿ ಕೊರತೆ ಇದೆ, ಸುಮಾರು 80 ಕೋಟಿ ಅನುದಾನವನ್ನು ಕ್ಷೇತ್ರದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಕೊಟ್ಟಿದೆ ಆದರೆ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದೆ ತಮಗೆ ಬೇಕಿದಲ್ಲಿ ಯಾವುದೇ ಟೆಂಡರ್ ಕರಿಯದೆ ಕಳಪೆ ಸಿಸಿ ರಸ್ತೆ ಕಾಮಗಾರಿಗೆ ಖರ್ಚು ಮಾಡುತ್ತಿದ್ದಾರೆ, ಇದರ ಬಗ್ಗೆ ತನಿಖಾ ತಂಡ ತನಿಖೆ ಮಾಡುವುದಿದೆ ಎಂದು ಹೇಳಿದರು.

ನನ್ನ ಅವಧಿಯಲ್ಲಿ ಕೋರ್ಟ್, ಸಬ್ ರಿಜಿಸ್ಟರ್, ತಾಯಿ ಮಕ್ಕಳ ಆಸ್ಪತ್ರೆ ಸೇರಿದಂತೆ ಅಮೃತ ಯೋಜನೆಗೆ 94 ಕೋಟಿ ಅನುದಾನ ತಂದಿದ್ದು ನಾನು ಆದರೆ ಅವುಗಳನ್ನು ಉದ್ಘಾಟನೆ ಮಾಡುತ್ತಾ ಪೂಜೆಗಳನ್ನು ಮಾಡುತ್ತಿರುವುದು ಈಗಿನ ಶಾಸಕರು, ಕ್ಷೇತ್ರಕ್ಕೆ ಅನುದಾನ ಕೊಟ್ಟರು ಸರ್ಕಾರದ ಮೇಲೆ ಸುಳ್ಳು ಆರೋಪ ಮಾಡುತ್ತಿರುವದು ತಮ್ಮ ಇಚ್ಛಾಶಕ್ತಿ ಕೊರತೆ ತೋರಿಸುತ್ತಿದೆ. ಅಭಿವೃದ್ಧಿಯಲ್ಲಿ ಅಂಕಿ ಸಂಖ್ಯೆಯೊಂದಿಗೆ ಚರ್ಚೆಗೆ ಸಿದ್ದನಿದ್ದೇನೆ, ನೀವು ಬನ್ನಿ ಅಭಿವೃದ್ಧಿ ಬಗ್ಗೆ ಚರ್ಚಿಸೋಣ, ಅದನ್ನು ಬಿಟ್ಟು ಕುಡಿಯಲು ನೀರು ಕೇಳಿದ ಸಾರ್ವಜನಿಕರಿಗೆ ಮನೆಗೆ ಬಂದು ಕೇಳಬೇಕು ಎಂದು ಹೇಳುವ ನೀವು ಜನರ ಸೇವಕ ಎಂಬುದನ್ನು ಮರೆತಿದ್ದೀರಿ, ಜನರೆ ಹೇಳುತ್ತಾರೆ ಸರ್ಕಾರದ ಸಾಧನೆ ಏನು ಎಂಬುದು ನಿಮ್ಮ ಸುಳ್ಳು ಆರೋಪಗಳನ್ನು ಯಾರು ನಂಬುವುದಿಲ್ಲ ಎಂದು ಕಠೋರವಾಗಿ ಹೇಳಿದರು.

ನಿಮಗೆ ಮೊದಲು ಕ್ಷೇತ್ರದ ಬಗ್ಗೆ ಕಾಳಜಿ ಬರಲಿ, ಕ್ಷೇತ್ರದ ಅಭಿವೃದ್ಧಿ ಮಾಡಿ ಅದನ್ನು ಬಿಟ್ಟು ಸುಳ್ಳು ಹೇಳುವುದು ಶೋಭೆಯಲ್ಲ ಎಂದು ಕಿವಿ ಮಾತು ಹೇಳಿದರು.

ಈ ಸಂದರ್ಭದಲ್ಲಿ ಲಿಂಗಸೂಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಗೋವಿಂದ ನಾಯಕ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಅಮರೇಶ ಹಿರೇಹೆಸರೂರು, ತಾಲ್ಲೂಕ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ವೆಂಕಟೇಶ ಗುತ್ತೆದಾರ ರವರು, ಪುರಸಭಾ ಅಧ್ಯಕ್ಷರಾದ ಬಾಬುರೆಡ್ಡಿ ಮುನ್ನೂರು, ಪುರಸಭಾ ಸದಸ್ಯರಾದ ಮಹ್ಮದ್ ರಫೀ, ಸಂಜೀವಪ್ಪ ಚಲುವಾದಿ ಸಂಜೀವನಕುಮಾರ,ಯುವ ಕಾಂಗ್ರೆಸ್ ಅಧ್ಯಕ್ಷ ಸಂತೋಷ ಸೊಪ್ಪಿಮಠ, ಮೌನೇಶ ಪೂಜಾರಿ ಸೇರಿದಂತೆ ಇತರರು ಇದ್ದರು.

# ಶಾಸಕ ಹಂಪಯ್ಯ ನಾಯಕರಿಂದ ಉದ್ಘಾಟನೆಗೊಂಡ ನೂತನ ಮೆಹಬೂಬ್ ಸ್ವೀಟ್ಸ್ ಸ್ಟಾಲ್

ಜನವಾದಿ ವಾರ್ತೆ



ಮಾನ್ವಿ ಮೇ 22– ಪಟ್ಟಣದಲ್ಲಿ ನೂತನ ಮೆಹಬೂಬ್ ಸ್ವೀಟ್ಸ್ ಸ್ಟಾಲ್ ಅನ್ನು ಶಾಸಕ ಹಂಪಯ್ಯನಾಯಕ ಉದ್ಘಾಟಿಸಿ ಮಾತನಾಡಿ ಬಾಬು ರವರ ಕುಟುಂಬದವರು ಕಳೆದ ಅನೇಕ ವರ್ಷಗಳಿಂದ ಗುಣಮಟ್ಟದ ಸಿಹಿ ತಿಂಡಿಗಳ ಮಾರಾಟದ ಮೂಲಕ ಹೆಸರು ಪಡೆದಿದ್ದಾರೆ ಇಂದು ಅವರು ಗ್ರಾಹಕರಿಗೆ ಅನೇಕ ಹೊಸ ಸಿಹಿ ತಿನಿಸುಗಳನ್ನು ನೀಡುವುದಕ್ಕಾಗಿ ತಮ್ಮ ಅಂಗಡಿಯನ್ನು ವಿಸ್ತಾರಿಸಿ ಕೊಂಡಿದ್ದು ಅವರಿಗೆ ಉತ್ತಮವಾಗಿ ವ್ಯಾಪಾರದಲ್ಲಿ ಯಶಸ್ಸುಸಿಗಲಿ ಎಂದು ಹಾರೈಸಿದರು.

ಮೆಹಬೂಬ್ ಸ್ವೀಟ್ಸ್ ಸ್ಟಾಲ್ ಮಾಲಿಕ ಬಾಬು ಮಾತನಾಡಿ ನಮ್ಮ ಹಿರಿಯರಿಂದ ಬಳುವಳಿಯಾಗಿ ಸಿಹಿತಿಂಡಿಗಳ ವ್ಯಾಪರ ದೊರೆತಿ–ದ್ದು ನಮ್ಮಲ್ಲಿ ದೊರೆಯುವ ಸಿಹಿ ತಿನಿಸುಗಳನ್ನು ರಾಜ್ಯದ ವಿವಿಧ ಜಿಲ್ಲೆ ಸೇರಿದಂತೆ ವಿದೇಶಗಳಲ್ಲಿ ಕೂಡ ಹೆಸರು ಮಾಡಿದೆ. ಗ್ರಾಹಕರಿಗೆ ಗುಣಮಟ್ಟದ ಸಿಹಿ ತಿನ್ನಿಸುಗಳನ್ನು ನೀಡುವುದಕ್ಕೆ ಹೆಚ್ಚಿನ ಅದ್ಯತೆಯನ್ನು ನೀಡಲಾಗುವುದು ಎಂದು ತಿಳಿಸಿದರು.

ಇವರ ಅಂಗಡಿಯಲ್ಲಿ ತಯಾರಗುವ ಪಿಸ್ತಾ ಡ್ರೈ ಫ್ರೂಟ್ ,ಕರದಂಟು,ಹಾಗೂ ಶುಗರ್ ಲೇಸ್ ಸಿಹಿ ತಿಂಡಿಗಳಿಗೆ, ಹಾಗೂ ಕಾರ ದಿನಿಸುಗಳಿಗೆ ಹೆಚ್ಚಿನ ಪ್ರಸಿದ್ದಿ ಪಡೆದಿದೆ. ಬೆಳಿಗಿನ ಉಪಹಾರವಾಗಿ ಚೋಲೆ ಬಟ್ಟೂರ,ವಗ್ಗರಣಿ ಗ್ರಾಹಕರ ಮನಸೆಳೆಯುತ್ತಿದೆ.

ಮಾಜಿ ಶಾಸಕರಾದ ಗಂಗಾಧರ ನಾಯಕ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ಡಾ. ಗುಲಾಮ್ ಜಿಲಾನಿ, ಸೈಯದ್ ಅಕ್ಬರ ಪಾಷಾ, ಡಾ. ರೋಹಿಣಿ ಮಾನ್ವಿ ಕರ್,ಡಾ. ರಾಘವೇಂದ್ರ, ರಾಜಾ ಸುಭಾಷ್ ಚಂದ್ರ ನಾಯಕ, ಆದಮ್ ಬೇಗ್,

ಯೂಸುಫ್ ಖಾನ್, ಜಾವೇದ್ ಖಾನ್, ಬಿ.ಜಿ. ದೇಸಾಯಿ, ಮೋಹಿನ್ ಖಾನ್, ಯುನೋಸ್ ಸಾಹುಕಾರ, ಶಕ್ಷ ವಲಿ, ಇನ್ನಿತರರು ಇದ್ದರು.

# ಆಡಳಿತ ಸುಧಾರಣೆಗೆ 189 ಹೊಸ ಶಿಫಾರಸು



ಬೆಂಗಳೂರು ಮೇ 22– ಆಡಳಿತ ಸುಧಾರಣಾ ಆಯೋಗದ 8ನೇ ವರದಿಯಲ್ಲಿ 189 ಹೊಸ ಶಿಫಾರಸುಗಳನ್ನು ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಯೋಗದ 8ನೇ ವರದಿಯನ್ನು ಸಲ್ಲಿಸಿದ ನಂತರ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಹಿಂದಿನ ಏಳು ವರದಿಗಳಲ್ಲಿ ಒಟ್ಟು 5,039 ಶಿಫಾರಸ್ಸುಗಳನ್ನು ಮಾಡಲಾಗಿದ್ದು, ಒಟ್ಟಾರೆ ಶೇ.30ರಷ್ಟು ಅನುಷ್ಠಾನಗೊಂಡಿದ್ದು, ಶೇ.53ಕ್ಕೂ ಹೆಚ್ಚು ಶಿಫಾರಸ್ಸುಗಳನ್ನ ಸಂಪೂರ್ಣವಾಗಿ ಅನುಷ್ಠಾನಗೊಳಿಸುವತ್ತ ಕ್ರಮ ಜರುಗಿಸಲಾಗುತ್ತಿದೆ. ಇದು ಆಡಳಿತ ಸುಧಾರಣೆಯಲ್ಲಿ ಮಹತ್ತರ ಹೆಜ್ಜೆಯಾಗಿದೆ ಎಂದು ಹೇಳಿದರು.

8ನೇ ವರದಿಯಲ್ಲಿ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ಇಲಾಖೆ, ಮುದ್ರಣ ಲೇಖನ ಸಾಮಾಗ್ರಿ ಮತ್ತು ಪ್ರಕಟಣೆಗಳ ಇಲಾಖೆ ಒಳಗೊಂಡಿದೆ ಎಂದರು. ಪಡಿತರಚೀಟಿ, ಡೇಟಾ ಬೇಸ್, ಜನನ–ಮರಣ ನೋಂದಣಿ ತಂತ್ರಾಂಶದೊಂದಿಗೆ ನೌಕರರ ಡೇಟಾವನ್ನು ಪ್ರತಿ ವರ್ಷ ಸಂಂ–ಯೋಜಿಸಬೇಕು.

ಸಾಮಾಜಿಕ, ಆರ್ಥಿಕ ಜಾತಿ ಗಣತಿ ಸಮಯದಲ್ಲಿ ಬಿಪಿಎಲ್ ಕುಟುಂಬಗಳನ್ನು ಗುರುತಿಸಲು ನಿಗದಿಪಡಿಸಿದ ಮಾನದಂಡಗಳನ್ನು ಸರ್ಕಾರ ಸೂಕ್ತ ಮಾರ್ಪಾಡುಗಳೊಂದಿಗೆ ಬಿಪಿಎಲ್ ಕುಟುಂಬಗಳನ್ನು ಗುರುತಿಸಲು ಪರಿಗಣಿಸಬಹುದು ಎಂಬ ಶಿಫಾರಸ್ಸು ಮಾಡಲಾಗಿದೆ. ಪ್ರತಿಯೊಂದು ಇಲಾಖೆಯ ಮೇಲಿನ ಕೆಲಸದ ಹೊರೆಯ ಸಮಗ್ರ ವರದಿಯನ್ನು ಅಧ್ಯಯನ ಮಾಡಿ ಸಿಬ್ಬಂದಿಯ ವೃಂದ ಮತ್ತು ನೇಮಕಾತಿಗಳಿಗೆ ಅಗತ್ಯ ತಿದ್ದುಪಡಿಗೆ ಸೂಚಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದರು.

ಶಿಫಾರಸ್ಸುಗಳ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಲು ಸರ್ಕಾರವು ಕಾರ್ಯತಂತ್ರವನ್ನು ಅಳವಡಿಸಿಕೊಳ್ಳಬೇಕು. ಉನ್ನತಮಟ್ಟದ ಮೇಲ್ವಿಚಾರಣಾ ಸಮಿತಿ ರಚನೆ, ಡಿಜಿಟಲ್ ಟ್ರ್ಯಾಕಿಂಗ್ ಕಾರ್ಯವಿಧಾನ ಅಳವಡಿಕೆ, ಇಲಾಖೆಗಳೊಂದಿಗೆ ಸಮನ್ವಯ ಬಲಪಡಿಸುವುದು, ಅನುಷ್ಠಾನಗೊಂಡ ಶಿಫಾರಸುಗಳ ಪರಿಣಾಮವನ್ನು ಸಮೀಕ್ಷೆ ಮಾಡಿ ಅಗತ್ಯ ಕ್ರಮ ಕೈಗೊಳ್ಳುವುದು ವರದಿಯ ಪ್ರಮುಖ ಶಿಫಾರಸ್ಸಾಗಿದೆ ಎಂದು ಅವರು ತಿಳಿಸಿದರು.

23 ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಮೊದಲ ಆದ್ಯತೆಯಲ್ಲಿ ಭರ್ತಿ ಮಾಡಲು ಶಿಫಾರಸ್ಸು ಮಾಡಲಾಗಿದೆ. ವಿಧಾನಸೌಧ–ವಿಕಾಸೌಧ ಬಹುಮಹಡಿ ಕಟ್ಟಡದ ಬಳಿ ಸರ್ಕಾರಿ ಕೇಂದ್ರ ಲೇಖನ ಸಾಮಾಗ್ರಿ ಮಳಿಗೆಗಳನ್ನು ಸ್ಥಾಪಿಸಲು ಶಿಫಾರಸ್ಸು ಮಾಡಲಾಗಿದೆ. ಬಹು ಆದಾಯ ಪ್ರಮಾಣಪತ್ರ ನೀಡುವುದನ್ನು ನಿಲ್ಲಿಸಬೇಕು. ಕೆಪಿಎಸ್‌ಸಿ ಶಾಖಾ ಕಚೇರಿಯನ್ನು ಧಾರವಾಡದಲ್ಲಿ ತೆರೆಯಲು ಶಿಫಾರಸು ಮಾಡಲಾಗಿದೆ ಎಂದರು.

# ದೇವದುರ್ಗ ಸಿಡಿಲಿನಿಂದ ಮರಣ ಹೊಂದಿದ ಕುಟುಂಬಗಳಿಗೆ 20 ಲಕ್ಷ ರೂಪಾಯಿಗಳು ಪರಿಹಾರ ನೀಡಲು ವಿವಿಧ ಸಂಘಟನೆಗಳಿಂದ ಜಿಲ್ಲಾಡಳಿತಕ್ಕೆ ಮನವಿ

ಜನವಾದಿ ವಾರ್ತೆ



ದೇವದುರ್ಗ ಮೇ 22– ಕಳೆದ ಒಂದು ವಾರದಿಂದ ಇಡೀ ಜಿಲ್ಲೆ ಒಳಗೊಂಡಂತೆ ದೇವದುರ್ಗ ತಾಲೂಕಿನಲ್ಲಿ ಅಕಾಲಿಕ ಮಳೆಯಿಂದ ಸಿಡಿಲಿನ ಹೊಡೆತಕ್ಕೆ ಜನಜಾನುವಾರುಗಳ ಸಾವು ನೋವುಗಳು ಉಂಟಾಗಿದ್ದು ಸತ್ತವರ ಕುಟುಂಬಕ್ಕೆ ಸರಕಾರದಿಂದ ಜಿಲ್ಲಾಡಳಿತವು 5 ಲಕ್ಷ ರೂಪಾಯಿ ಪರಿಹಾರ ಹಣ ನೀಡಿದ್ದು ಇದರಿಂದ ಯಾವುದೇ ರೀತಿಯ ಪ್ರಯೋಜನವಿಲ್ಲ ಸರ್ಕಾರ ಈ ತಕ್ಷಣವೇ ಸತ್ತವರ ಕುಟುಂಬದ ಸದಸ್ಯರಿಗೆ ಪರಿಹಾರ ಧನವಾಗಿ 20 ಲಕ್ಷ ರೂಪಾಯಿಗಳನ್ನು ಹಾಗೂ ಗಾಯಗೊಂಡವರಿಗೆ 10 ಲಕ್ಷ ರೂಪಾಯಿಗಳು ಮರಣ ಹೊಂದಿದ ಜಾನುವಾರುಗಳಿಗೆ 5 ಲಕ್ಷ ರೂಪಾಯಿಗಳ ಪರಿಹಾರ ಹಣವನ್ನು ಈ ತಕ್ಷಣವೇ ಜಿಲ್ಲಾಡಳಿತ ಘೋಷಣೆ ಮಾಡಬೇಕು ಕುಟುಂಬ ಸದಸ್ಯರಿಗೆ ಶಾಶ್ವತ ಪರಿಹಾರವಾಗಿ ಸರ್ಕಾರಿ ನೌಕರಿಯನ್ನು ನೀಡಬೇಕು ದೇವದುರ್ಗ ತಾಲೂಕ ಒಳಗೊಂಡಂತೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ದಿನ ದಿನವೇ ಅಕಾಲಿಕ ಮಳೆಯಿಂದ ಸಿಟಿಲಿನ ಆರ್ಭಟದಿಂದ ಸಾವು ನೋವುಗಳು ಅಧಿಕವಾಗಿ ಸಂಭವಿಸುತ್ತಿವೆ ಇದಕ್ಕೆ ಕಾರಣ ಆಯಾ ತಾಲೂಕ್ ಆಡಳಿತ ಮತ್ತು ಜಿಲ್ಲಾಡಳಿತವು ನಿರ್ಲಕ್ಷ ಮತ್ತು ಬೇಯೋ ಜವಾಬ್ದಾರಿ ಆಡಳಿತದ ವೈಫಲ್ಯವು ಎತ್ತಿ ತೋರಿಸುತ್ತದೆ ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಹವಾಮಾನ ಇಲಾಖೆಯ ವಿಶೇಷ ತಜ್ಞರು ತಂಡವನ್ನು ರಚಿಸಿ ಜಿಲ್ಲೆ ಎಲ್ಲಾ ತಾಲೂಕುಗಳಲ್ಲಿ ಸಂಶೋಧನೆ ಒಳಪಡಿಸಬೇಕು ಹಾಗೂ ಸಿಡಿಲು ಆಕರ್ಷಣೆ ಒಳಪಡುವ ಸ್ಥಳಗಳಲ್ಲಿ ಸಿಡಿಲು ನಿರೋಧಕ ಯಂತ್ರ ಉಪಕರಣಗಳನ್ನು ಅಳವಡಿಸಬೇಕು ಇದರ ಜೊತೆಗೆ ರಾಜ್ಯ ಹವಾಮಾನ ಇಲಾಖೆಯ ಬಿಡುಗಡೆಗೊಳಿಸುವ ಮಳೆ ಗಾಳಿ ಸಂದೇಶವುಗಳನ್ನು ಜಿಲ್ಲಾಡಳಿತ ತಾಲೂಕ ಆಡಳಿತ ಜನಸಾಮಾನ್ಯರಲ್ಲಿ ಮುಂಜಾಗ್ರತೆ ಅರಿವು ಮೂಡಿಸಬೇಕು ಹಾಗೂ ಸಂದೇಶಗಳನ್ನು ರವಾನಿಸಬೇಕು ಹೋಬಳಿಗಳು ಗ್ರಾಮಗಳು ಹಳ್ಳಿಗಳಲ್ಲಿ ಕಂದಾಯ ನಿರೀಕ್ಷಕರು ಗ್ರಾಮ ಆಡಳಿತ ಅಧಿಕಾರಿಗಳು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಸಹಾಯಕರು ಗ್ರಾಮ ಪಂಚಾಯಿತಿ ಮೂಲಕ ಜನಸಾಮಾನ್ಯರಲ್ಲಿ ಸಿಡಿಲಿಂದ ಆಗುವ ಅಪಾಯಗಳನ್ನು ಬಗ್ಗೆ ಜಿಲ್ಲಾಡಳಿತವು ರೈತ ಅಲೆಮಾ–ರಿಗಳು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಿ ಸುರಕ್ಷಿತವಾದ ಸ್ಥಳಕ್ಕೆ ತರುವ ಕ್ರಮವನ್ನು ಜಿಲ್ಲಾಡಳಿತವು ಕ್ರಮ ಕೈಗೊಳ್ಳಬೇಕು ಸ್ಥಳೀಯ ಮಟ್ಟದಲ್ಲಿ ಸಿಡಿಲಿನಿಂದ ರಕ್ಷಣೆ ಪಡೆಯುವುದಕ್ಕೆ ನುರಿತ ತಜ್ಞರಿಂದ ವಿಶೇಷವಾದ ಮಾಹಿತಿಗಳನ್ನು ಪತ್ರಿಕೆಗಳು ದೂರದರ್ಶನಗಳು ರೇಡಿಯೋ ಗಳು ಸಾಮಾಜಿ–ಕ ಜಾಲತಾಣಗಳ ಮುಖಾಂತರ ಜಾಗೃತೆ ಮೂಡಿಸುವುದು ಇದರಿಂದ ಜನರ ಅಮಾಯಕರ ಪ್ರಾಣಕ್ಷಣೆಗೆ ಜಿಲ್ಲಾಡಳಿತ ಮತ್ತು ತಾಲೂಕ್ ಆಡಳಿತ ಮುಂದಾಗಬೇಕೆಂದು ಹೋರಾಟಗಾರರು ತಮ್ಮ ಮನವಿ ಪತ್ರದಲ್ಲಿ ತಿಳಿಸಿದ್ದಾರೆ ಮನೀ ಪತ್ರವನ್ನು ತಾಲೂಕ ಆಡಳಿತದ ಗ್ರೇಡ್ ಟು ತಹಸಿಲ್ದಾರದ ಸತ್ಯಮ್ಮ ಇವರ ಮುಖಾಂತರ ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಇವರಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು ಈ ಸಂದರ್ಭದಲ್ಲಿ ವಿವಿಧ ಸಂಘಟನೆ ಮುಖಂಡರಾದ ಹನುಮಂತಪ್ಪ ಮನ್ನಾಪುರ ಅಧ್ಯಕ್ಷರು ಜಿಲ್ಲಾ ಎಂ ಆರ್ ಎಚ್ ಎಸ್ ರಾಯಚೂರು ರೈತ ಸಂಘದ ಅಧ್ಯಕ್ಷರಾದ ಮಲ್ಲಿಕಾರ್ಜುನ್ ಪಾಟೀಲ್ ಮಾಜಿ ತಾಲೂಕು ಪಂಚಾಯಿತಿ ಸದಸ್ಯರಾದ ಹನುಮಗೌಡ ನಾಯಕ್ ರಾಘವೇಂದ್ರ ನಾಯಕ ಅಂಜ ಳ ಎಚ್. ಶಿವರಾಜ್ ಅಧ್ಯಕ್ಷರು ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು ದೇವದುರ್ಗ ಪತ್ರಕರ್ತರಾದ ಕ್ರಾಂತಿ ಕುಮಾರ್ ರಾಯಚೂರು ಕರ್ ಸೇರಿದಂತೆ ವಿವಿಧ ಸಂಘಟನೆಯ ಮುಖಂಡರು ರೈತ ಸಂಘದ ಪದಾಧಿಕಾರಿಗಳು ನಾಗರೀಕರು ಕನ್ನಡಪರ ಹೋರಾಟ ಸಂಘಟನೆಯ ಮುಖಂಡರುಗಳು ಹಾಗೂ ಸುತ್ತಮುತ್ತಲಿನ ಗ್ರಾಮದ ರೈತರು ಸದಸ್ಯರು ಈ ಹೋರಾಟದಲ್ಲಿ ಭಾಗವಹಿಸಿ ತಾಲೂಕ ಮತ್ತು ಜಿಲ್ಲಾಡಳಿತವನ್ನು ಗಮನಿಸಿ ಹೇಳಿದರು.

ಹೋರಾಟಗಾರರು ಪ್ಲಾಸ್ಟಿಕ್ ಚೀಲಗಳನ್ನು ಸಿಡಿಲಿನ ರಕ್ಷಣಾ ಸಂಕೇತವಾಗಿ ಅಣುಕು ಮಾಡಿದರು ಮುಖಾಂತರ ಹೋರಾಟದಲ್ಲಿ ವಿಭಿನ್ನವಾಗಿ ಗಮನ ಸೆಳೆದರು..

ಜನವಾದಿ
ಜಾಹೀರಾತಿಗಾಗಿ
ಸಂಪರ್ಕಿಸಿ:
9448300139

# ವಿವಿಧ ಗ್ರಾ ಪಂ ಗಳಿಗೆ ಕೇಂದ್ರ ತಂಡ ಭೇಟಿ–ಕಾಮಗಾರಿಗಳ ಪರಿಶೀಲನೆ

ಜನವಾದಿ ವಾರ್ತೆ



ಸಿರವಾರ ಮೇ 22– ತಾಲೂಕಿನ ಅತ್ತನೂರು ಗ್ರಾಮ ಪಂಚಾಯತಿಯ ಶಾಖಾಪುರ ಹಾಗೂ ಚಾಗಬಾವಿ ಗ್ರಾಮ ಪಂಚಾಯತಿ ಚಾಗಬಾವಿ ಕ್ಯಾಂಪ್‌ನಲ್ಲಿ 2024– 25 ನೇ ಸಾಲಿನಲ್ಲಿ 'ಜಲ ಸಿಂಚನ ಜಲ ಭಾಗಿದಾರ' ಯೋಜನೆಯಡಿ ಅನುಷ್ಠಾನಗೊಂಡ ಹಳ್ಳ ಹಾಗೂ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಭಾರತ ಸರಕಾರ ಮಿನಿಸ್ಟರಿ ಆಫ್ ಜಲ ಶಕ್ತಿ ವಿಭಾಗದ ಕೇಂದ್ರ ನೋಡಲ್ ಅಧಿಕಾರಿ ಸಿ. ಸತ್ಯಮೂರ್ತಿ ಭೇಟಿ ನೀಡಿ ಪರಿಶೀಲಿಸಿದರು.

ಚಾಗಬಾವಿ ಕ್ಯಾಂಪ್ ನಲ್ಲಿ 2024–25ನೇ ಸಾಲಿನಲ್ಲಿ ನರೇಗಾದಡಿ ಅನುಷ್ಠಾನಗೊಂಡಿರುವ ನಾಲಾ ಹೊಳೆತ್ತಿರುವ ಕಾಮಗಾ–ರಿಯನ್ನು ವೀಕ್ಷಣೆ ಮಾಡಿದರು. ಈ ಕಾಮಗಾರಿಯಿಂದ ರೈತರಿಗೆ ಅನುಕೂಲವಾಗಿರುವ ಬಗ್ಗೆ ಮಾಹಿತಿ ಪಡೆದುಕೊಂಡರು.ಶಾಖಾಪೂರ ಗ್ರಾಮದಲ್ಲಿ ಹಳ್ಳ ಅಭಿವೃದ್ಧಿ ಕಾಮಗಾರಿ ಪರಿಶೀಲಿಸಿದರು.

ಸಹಾಯಕ ನಿರ್ದೇಶಕರಾದ (ಗ್ರಾ.ಉ) ಅಣ್ಣಾರಾವ್, ಮಂಜುನಾಥ ಜಾವೂರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ಮಮತಾ, ರಮೇಶ, ಪ್ರಸಾದ, ತಾಂತ್ರಿಕ ಸಂಯೋಜಕರು ಶಿವು, ತಾಂತ್ರಿಕ ಸಹಾಯಕ ಸಾಗರ್, ಅನಂತರೆಡ್ಡಿ, ಐಇಸಿ ಸಂಯೋಜಕ ರಾಜೇಂದ್ರ, ಬಿ.ಎಫ್.ಟಿ, ಗ್ರಾಮ ಪಂಚಾಯತಿ ಸಿಬ್ಬಂದಿ ಇದ್ದರು.

# ಮಗುವಿಗೆ ತಪ್ಪದೇ ದಡಾರ–ರೂಬೆಲ್ಲಾ ಲಸಿಕೆ ಹಾಕಿಸಿ – ಡಾ.ಶರಣಬಸಪ್ಪ ಗಣಜಲಖೇಡ



ಬಳ್ಳಾರಿ ಮೇ 22– ನಿರ್ಲಕ್ಷಿಸಿದರೆ ಅಪಾಯಕಾರಿಯಾಗುವ ದಡಾರ ರೋಗ ತಡೆಯಲು ಮಗುವಿನ ವಯಸ್ಸು ಒಂಬತ್ತು ತಿಂಗಳು ತುಂಬಿದ ನಂತರ ತಪ್ಪದೇ ದಡಾರ–ರೂಬೆಲ್ಲಾ ಲಸಿಕೆ ಹಾಕಿಸಬೇಕು ಎಂದು ಕಲಬುರಗಿ ವಿಭಾಗದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಉಪನಿರ್ದೇಶಕ ಡಾ.ಶರಣಬಸಪ್ಪ ಗಣಜಲಖೇಡ ಅವರು ಹೇಳಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯದಲ್ಲಿ ಬುಧವಾರ ಆಯೋಜಿಸಿದ್ದ ವೈದ್ಯಾಧಿಕಾರಿಗಳ ಜಾಗೃತಿ ಸಭೆಯಲ್ಲಿ ಅವರು ಭಾಗವಹಿಸಿ ಮಾತನಾಡಿದರು.

ಸಾಮಾನ್ಯವಾಗಿ ಬೇಸಿಗೆಯಲ್ಲಿ ಬೆವರುಸಾಲೆಯಿಂದ ದೇಹದ ಮೇಲೆ ನುಚ್ಚು ಗುಳ್ಳೆಗಳು ಕಂಡು ಬರುವುದು ಸಹಜ. ದಡಾರ ಸೋಂಕು ಸಹ ನೋಡಲು ಇದೇ ರೀತಿ ಕಂಡು ಬರುತ್ತದೆ. ಮುಂಜಾಗೃತೆ ಕ್ರಮವಾಗಿ ಯಾವುದೇ ತಪ್ಪು ನಂಬಿಕೆಗಳನ್ನು ನಂಬದೆ ಮಕ್ಕಳಿಗೆ ದಡಾರ–ರೂಬೆಲ್ಲಾ ಲಸಿಕೆ ಹಾಕಿಸಬೇಕು ಎಂದರು.

ಮೇ 26 ರಿಂದ ಒಂದು ವಾರ ಜರುಗುವ ವಿಶೇಷ ಲಸಿಕಾ ಕಾರ್ಯಕ್ರಮದಲ್ಲಿ ದಡಾರ ಪ್ರಕರಣಗಳು ಈ ಪೂರ್ವದಲ್ಲಿ ವರದಿಯಾದ ಗ್ರಾಮ, ಬಡಾವಣೆಗಳನ್ನು ಗು–ರಿಯಾಗಿಟ್ಟುಕೊಂಡು ಸಮುದಾಯದಲ್ಲಿ ಅಮ್ಮ, ತಟ್ಟು, ಗಂಜೀನಿ ಎಂದು ಕರೆಯಲ್ಪಡುವ ದಡಾರ ರೋಗ ಕುರಿತು ಜಾಗೃತಿ ನೀಡಬೇಕು ಎಂದರು.

ಪಾಲಕರು ಸಹ ತಮ್ಮ ಮಕ್ಕಳಿಗೆ 9 ತಿಂಗಳು ತುಂಬಿದ ನಂತರ ಹಾಗೂ ಒಂದುವರೆ ವರ್ಷದ ಅವಧಿಯಲ್ಲಿ ತಪ್ಪದೆ ದಡಾರ ಲಸಿಕೆ ಹಾಕಿಸಲು ಮುಂದಾಗಬೇಕು. ಈ ಕುರಿತು ವ್ಯಾಪಕ ಜಾಗೃತಿ ನೀಡಬೇಕು ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶಬಾಬು ಮಾತನಾಡಿ, ದಡಾರ ವೈರಸ್ ಹೊಂದಿದ ಮಗುವಿನ ಸಂಪರ್ಕಕ್ಕೆ ಬರುವ ಇನ್ನೊಂದು ಮಗುವಿಗೆ ಬರುವ ಸಾಧ್ಯತೆ ಹೆಚ್ಚು ಇದ್ದು, ಕೆಮ್ಮು ಮತ್ತು ಸೀನುವಿಕೆಯಿಂದ ಇನ್ನೊಬ್ಬರಿಗೆ ಹರಡುತ್ತದೆ. ದಡಾರ ಸೋಂಕಿತ ವ್ಯಕ್ತಿಗೆ ಒಡ್ಡಿಕೊಂಡ ಸುಮಾರು 10 ದಿನಗಳ ನಂತರ ದಡಾರದ ಲಕ್ಷಣಗಳು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತವೆ ಎಂದು ತಿಳಿಸಿದರು.

ದಡಾರದ ಅತ್ಯಂತ ಪ್ರಮುಖ ಲಕ್ಷಣವೆಂದರೆ ಕೆಂಪು ಬಣ್ಣದ ದದ್ದು(ಗುಳ್ಳೆ). ಆದರೆ ಇದು ಸಾಮಾನ್ಯವಾಗಿ ಮೊದಲ ಲಕ್ಷಣವಲ್ಲ, ಬದಲಾಗಿ ದಡಾರವು ಸಾಮಾನ್ಯವಾಗಿ ಜ್ವರ ತರಹದ ಕಾಯಿಲೆಯಾಗಿ ಪ್ರಾರಂಭವಾಗುತ್ತದೆ. 2 ರಿಂದ 4 ದಿನಗಳವರೆಗೆ ಇರುತ್ತದೆ. ಜ್ವರ, ಆಯಾಸ, ತೀವ್ರ ಕೆಮ್ಮು, ಕಾಂಜಂಕ್ಟಿವಿಟಿಸ್ (ಕೆಂಪು ಕಣ್ಣುಗಳು), ಸ್ರವಿಸುವ ಮೂಗು, ಬಾಯಿಯಲ್ಲಿ ಬಿಳಿ ಚುಕ್ಕೆಗಳು (ಕೊಪ್ಲಿಕ್ ಚುಕ್ಕೆಗಳು ಎಂದು ಕರೆಯಲಾಗುತ್ತದೆ. ಅನಾರೋಗ್ಯದ 3 ರಿಂದ 7 ದಿನಗಳಲ್ಲಿ ದದ್ದು ಕಾಣಿಸಿಕೊಳ್ಳುತ್ತದೆ. ಇದು ಸಾಮಾನ್ಯವಾಗಿ ಕೆಂಪು ಮತ್ತು ಮಚ್ಚೆಯಿಂದ ಕೂಡಿರುತ್ತದೆ, ಆದರೆ ತುರಿಕೆ ಇರುವುದಿಲ್ಲ.

ದಡಾರದ ದದ್ದು ಸಾಮಾನ್ಯವಾಗಿ ತಲೆಯ ಮೇಲೆ ಪ್ರಾರಂಭವಾಗುತ್ತದೆ ಮತ್ತು ನಂತರ ದೇಹದ ಉಳಿದ ಭಾಗಗಳಿಗೆ ಹರಡುತ್ತದೆ. ಇದು ಸಾಮಾನ್ಯವಾಗಿ 4 ರಿಂದ 7 ದಿನಗಳವರೆಗೆ ಇರುತ್ತದೆ. ಒಂದು ವೇಳೆ ನಿರ್ಲಕ್ಷಿಸಿದರೆ ವಾಂತಿ–ಭೇದಿ, ನ್ಯೂಮೋನಿಯಾ ಉಂಟಾಗಿ ಮಗು ಮರಣ ಸಹ ಹೊಂದಬಹುದು, ಈ ಹಿನ್ನಲೆ ಪ್ರಸ್ತುತ 5 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಹೆಚ್ಚುವರಿಯಾಗಿ ಒಂದು ಡೋಸ್ ಲಸಿಕೆ ಹಾಗೂ ಇದರೊಂದಿಗೆ ವಿಟಾಮಿನ್–ಎ ಅನ್ನಾಂಗ ದ್ರಾವಣವನ್ನು ಸಹ ನೀಡಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ನಗರ ಪ್ರದೇಶದ ಕೊಳಚೆ ಪ್ರದೇಶಗಳು ಮತ್ತು ಗ್ರಾಮೀಣ ಪ್ರದೇಶ, ವಲಸೆ ಸ್ಥಳಗಳಲ್ಲಿ ಹೆಚ್ಚು ಜಾಗೃತಿ ನೀಡಿ ಲಸಿಕೆ ಹಾಕಿಸಲು ಸೂಚಿಸಿದರು.

ಇದೇ ವೇಳೆ ವಿವಿಧ ರಾಷ್ಟ್ರೀಯ ಕಾರ್ಯಕ್ರಮಗಳ ಕುರಿತು ಸುಧೀರ್ಘ ಚರ್ಚಿಸಿದರು.

ಸಭೆಯಲ್ಲಿ ಡಬ್ಲ್ಯೂ ಹೆಚ್‌ಓ ಸರ್ವೇಕ್ಷಣಾ ವೈದ್ಯಾಧಿಕಾರಿ ಡಾ.ಆರ್. ಎಸ್ ಶ್ರೀಧರ, ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಆರ್.ಅಬ್ದುಲ್ಲಾ, ಜಿಲ್ಲಾ ಸರ್ವೇಕ್ಷಾಧಿಕಾರಿ ಡಾ.ಮರಿಯಂಬಿ ವಿ.ಕೆ., ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರಕುಮಾರ ಸೇರಿದಂತೆ ತಾಲ್ಲೂಕು ಆರೋಗ್ಯಾಧಿಕಾರಿಗಳು, ಆಡಳಿತ ವೈದ್ಯಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಗೃಹರಕ್ಷಕ ದಳ: ನೋಂದಣಿಗೆ ಅರ್ಜಿ ಆಹ್ವಾನ

ರಾಯಚೂರು ಮೇ 22– ಇಲ್ಲಿನ ಗೃಹರಕ್ಷಕ ದಳದಿಂದ ನಾಗರೀಕ ಪೌರ ರಕ್ಷಣಾ ಸ್ವಯಂ ಸೇವಕರಾಗಲು ನೋಂದಣಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯಲ್ಲಿ ಯುದ್ಧದಂತಹ ಸಂದರ್ಭಗಳಲ್ಲಿ ಉಂಟಾಗುವ ಸಂಭವನೀಯ ಅಪಘಾತಗಳಿಂದ ಸಾರ್ವಜನಿಕರನ್ನು ರಕ್ಷಕಿಸುವ ಬಗ್ಗೆ ಸ್ವಯಂ ಸೇವಕರ ಅಗತ್ಯವಿರುವುದರಿಂದ ಸಿವಿಲ್ ಡಿಫೇನ್ಸ್ ಆಕ್ಟ್ 1968 ರಂತೆ ಪ್ರತಿ 100 ನಾಗರೀಕರಿಗೆ ಒಬ್ಬರಂತೆ ಪೌರರಕ್ಷಣಾ ಸ್ವಯಂ ಸೇವಕರನ್ನು ನೋಂದಣಿ ಮಾಡಿಕೊಳ್ಳಲಾಗುತ್ತಿದ್ದು, ಆಸಕ್ತರು ಮೇ.31ರೊಳಗಾಗಿ ನಿಗಧಿತ ಅರ್ಜಿ ನಮೂನೆಯನ್ನು ಭರ್ತಿಮಾಡಿ ಗೃಹರಕ್ಷಕದಳ ಜಿಲ್ಲಾ ಸಮಾದೇಷ್ಟರ ಕಚೇರಿ ಪ್ರಥಮ ದರ್ಜೆ ಕಾಲೇಜಿನ ಹಿಂದೆ ನಿಜಲಿಂಗಪ್ಪ ಕಾಲೋನಿ ರಾಯಚೂರು ಹಾಗೂ ಪೌರರಕ್ಷಣಾ ಕಚೇರಿ ಆರ್.ಟಿ.ಪಿ.ಎಸ್ ಕಾಲೋನಿ ಶಕ್ತಿನಗರ ಟೈಪ್–2 ಮನೆ.ನಂ. 03, ಶಕ್ತಿನಗರ, ಜಿ.ರಾಯಚೂರು ಅಥವಾ hgcd.karnataka.gov.in. ಮೂಲಕ ಅರ್ಜಿಗಳನ್ನು ಪಡೆದುಕೊಂಡು ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು 4ನೇ ತರಗತಿ ಉತ್ತೀರ್ಣರಾಗಿರಬೇಕು. ದೈಹಿಕವಾಗಿ ಸಧೃಡವಾಗಿರಬೇಕು. ಅರ್ಜಿ ಸಲ್ಲಿಸುವಾಗ ಆಧಾರ ಕಾರ್ಡ್ ನಕಲು ಪ್ರತಿ ಮತ್ತು ಅಂಕಪಟ್ಟಿ ಅಥವಾ ಶಾಲಾ ವರ್ಗಾವಣೆ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ನಾಗರೀಕ ಪೌರರಕ್ಷಣಾ ಸ್ವಯಂ ಸೇವಕ ಸಂಸ್ಥೆಯಾಗಿದ್ದು ಯಾವುದೆ ಮಾಸಿಕ ವೇತನ ಇರುವದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಗೃಹರಕ್ಷಕದಳ ಕಚೇರಿ ದೂರವಾಣಿ ಸಂಖ್ಯೆ: 08532–221679, 9686767151 ಮತ್ತು ಶಕ್ತಿನಗರ ಪೌರರಕ್ಷಣಾ ಕಚೇರಿ ದೂರವಾಣಿ ಸಂಖ್ಯೆ: 9741333806ಗೆ ಸಂಪರ್ಕಿಸುವಂತೆ ಜಿಲ್ಲಾ ಗೃಹರಕ್ಷಕದಳ ಕಮಾಂಡೆಂಟ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿಂಧನೂರಿನಲ್ಲಿ ಅದ್ದೂರಿ ತಿರಂಗಾ ಯಾತ್ರೆ

ಜನವಾದಿ ವಾರ್ತೆ




ಸಿಂಧನೂರು ಮೇ 22 – ಪಹಲ್ಗಾಮ್ ದಾಳಿ ಹಿನ್ನಲೆಯಲ್ಲಿ ಭಾರತೀಯ ಸೈನ್ಯ ಆಪರೇಷನ್ ಸಿಂಧೂರ ಹೆಸರಿನಲ್ಲಿ ಭಯೋತ್ಪಾದಕರ ನೆಲೆಗಳ ಮೇಲೆ ಯಶಸ್ವಿ ಕಾರ್ಯಾಚರಣೆ ನಡೆಸಿದ ಹಿನ್ನಲೆಯಲ್ಲಿ ಗುರುವಾರ ನಗರದಲ್ಲಿ ಮಾಜಿ ಸೈನಿಕರ ನೇತೃತ್ವದಲ್ಲಿ ನಾಗರಿಕ ಸಮಿತಿಯಿಂದ ಅದ್ದೂರಿಯಾಗಿ ತಿರಂಗಾ ಯಾತ್ರೆ ನಡೆಯಿತು.

ನಗರದ ಪ್ರವಾಸಿ ಮಂದಿರದ ಬಳಿ ತಿರಂಗಾ ಯಾತ್ರೆಗೆ ಚಾಲನೆ ನೀಡಲಾಯಿತು. ಅಲ್ಲಿಂದ ಆರಂಭವಾದ ಬಸವವೃತ್ತ, ಹಳೇಬಜಾರ್ ಮತ್ತು ಚೆನ್ನಮ್ಮ ವೃತ್ತದ ಮೂಲಕ ಪ್ರಮುಖ ಬೀದಿಗಳಲ್ಲಿ ಸಾಗಿ ಗಾಂಧಿವೃತ್ತ ತಲುಪಿತು. ಸಂಕೇತ ಕಾಲೇಜು, ಆಕ್ಸ್‌ಫರ್ಡ್ ಕಾಲೇಜು, ಎಕ್ಸಲೆಂಟ್ ಕಾಲೇಜು, ಆದಿತ್ಯ ಕಾಲೇಜು ಹಾಗೂ ಪಾಟೀಲ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು 800 ಮೀಟರ್ ಉದ್ದದ ರಾಷ್ಟ್ರಧ್ವಜ ಹಿಡಿದು ಸಾಗಿದ್ದು ವಿಶೇಷವಾಗಿತ್ತು. ಯಾತ್ರೆಯ ಮೂಲಕ ಪ್ರತಿಯೊಬ್ಬರಲ್ಲಿ ದೇಶಭಕ್ತಿ ಜಾಗೃತಿಗೊಳಿಸುವ ಕೆಲಸ ಮಾಡಲಾಯಿತು.

ಬಂಗಾರಿ ಕ್ಯಾಂಪಿನ ಸಿದ್ದರಾಮ ಶರಣರು, ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ, ಮುಖಂಡರಾದ ಅಮರೇಗೌಡ ವಿರುಪಾಪುರ, ಬಸವರಾಜ ನಾಡಗೌಡ, ಕೆ.ಕರಿಯಪ್ಪ, ಸೋಮನಗೌಡ ಬಾದರ್ಲಿ, ಬಾಬುಗೌಡ ಬಾದರ್ಲಿ, ಎಂ.ದೊಡ್ಡಬಸವರಾಜ, ವೆಂಕಟೇಶ ಕೆ., ಸಿದ್ರಾಮೇಶ ಮನ್ನಾಪುರ, ಲಿಂಗರಾಜ ಹೂಗಾರ, ಶಿವಬಸನಗೌಡ ಗೋರೇಬಾಳ, ಕೃಷ್ಣಪ್ಪ ರಾಠೋಡ್, ಅಲ್ಲಮಪ್ರಭು ಪೂಜಾರ್, ಮಲ್ಲಿಕಾರ್ಜುನ ಜೀನೂರು, ಆರ್.ಸಿ.ಪಾಟೀಲ್, ಈರೇಶ ಇಲ್ಲೂರು, ರವಿ ಉಪ್ಪಾರ, ಸೈಯದ್ ಆಸೀಫ್, ಸಿದ್ದು ಹೂಗಾರ, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಪರಶುರಾಮ್, ಉಪಾಧ್ಯಕ್ಷ ಸುರೇಶ ಎಂ., ಪ್ರಧಾನ ಕಾರ್ಯದರ್ಶಿ ವೀರೇಶ ಯಾದವ್, ರುದ್ರಪ್ಪ, ನರಸಿಂಹರಾವ್, ಹನುಮೇಶ ಸೇರಿದಂತೆ ಅನೇಕರು ಇದ್ದರು.

# ತ್ಯಾಗಿಗಳ ಸ್ಮರಣೆ ಅಮರವಾಗಿದೆ –ಮಹಾಂತ ಸ್ವಾಮೀಜಿ

ಜನವಾದಿ ವಾರ್ತೆ



ಮುದಗಲ್ ಮೇ 22– ಮಹಾತ್ಮರ, ಶರಣರ, ಸಾಧಕರ, ಸತ್ಪುರುಷರ ತ್ಯಾಗಮಯ ಸಾಧನೆ ಅಮೂಲ್ಯವಾದದು. ಇತ್ತೀಚಿನ ದಿನಗಳಲ್ಲಿ ಜನರಿಗೆ ಹಣದ ವ್ಯಾಮೋಹ ಹೆಚ್ಚಾಗಿ ನೆಮ್ಮದಿ ಕಳೆದುಕೊಂಡಿದ್ದಾರೆ. ಹಣದಿಂದ ಎಲ್ಲವನ್ನು ಸಾಧಿಸಲು ಸಾಧ್ಯವಿಲ್ಲ. ಸತ್ಯದ ಮಾರ್ಗದಲ್ಲಿ ಇರುವವರ ಸಂಖ್ಯೆ ಕಡಿಮೆಯಾಗಿದೆ. ತ್ಯಾಗಕ್ಕೆ ಸಮಾಜದಲ್ಲಿ ಶ್ರೇಷ್ಠ ಬೆಲೆಯಿದೆ. ಬದುಕಿನ ಎಲ್ಲಾ ಆಯಾಮಗಳಿಗೆ ಮನಸ್ಸೇ ಕಾರಣವಾಗಿದೆ. ಸಂಯೋಗದ ಸಾಧನೆಯಲ್ಲಿ ಸುಖವಿದೆ. ವಿವೇಕ ಜಾಗೃತಿಯಿಂದ ತ್ಯಾಗ ಮನೋಭಾವನೆ ಬೆಳೆಯುತ್ತದೆ. ನಾಡಿನಲ್ಲಿ ತ್ಯಾಗಿಗಳ ಸ್ಮರಣೆ ಅಮರವಾಗಿದೆ ಎಂದು ತಿಮ್ಮಾಪೂರು ಕಲ್ಯಾಣಾಶ್ರಮ ಪೂಜ್ಯರಾದ ಮಹಾಂತ ಸ್ವಾಮೀಜಿ ಸಾಲಿಮಠ ಗುರುವಾರ ಹೇಳಿದರು.

ಪಟ್ಟಣದ ಜೈನ್ ಮಂದಿರದಲ್ಲಿ ಸಮುದಾಯದವರು ಹಮ್ಮಿಕೊಂಡಿದ್ದ, ರಾಯಚೂರಿನ ಉದ್ಯಮಿ ದಿಲೀಪ್ ದೋಖಾ ಜೂನ್ 11ರಂದು ಪಡೆಯುತ್ತಿರುವ ಜೈನ್ ಸನ್ಯಾಸ ಮುಮೋಕ್ಷ ದಿಕ್ಷಾ ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಭಾರತ ದೇಶ ಬಹುದೊಡ್ಡ ಪರಂಪರೆ ಮತ್ತು ವೈವಿಧ್ಯಮಯ ಧಾರ್ಮಿಕ ಭಾವನೆಯಿಂದ ಜಗತ್ತಿಗೆ ಬೆಳಕಾಗಿದೆ ಎಂದರು.

ಸಮುದಾಯದ ಮುಖಂಡ ಶೀತಲ್ ಕುಮಾರ ಜೈನ್ ಹಾಗೂ ರಾಯಚೂರಿನ ಮುಮೋಕ್ಷ ದಿಕ್ಷೆ ಪಡೆಯುತ್ತಿರುವ ದಿಲೀಪ್ ದೋಖಾ ಮಾತನಾಡಿ ಮನುಷ್ಯ ಸುಖ ಕಾಣುವ ಸನ್ಮಾರ್ಗ ಕುರಿತು, ತಾವರಗೇರಾ ಸುರೇಶ ಜೈನ್ ಕಾರ್ಯಕ್ರಮ ಬಗ್ಗೆ ಮಾತನಾಡಿದರು.

ಸಮುದಾಯದವರು ದಿಲೀಪ್ ದೋಖಾ ರವರಿಗೆ ಸನ್ಮಾನಿಸಿ ಗೌರವ ಸಮರ್ಪಣೆ ಸಲ್ಲಿಸಿದರು.

ಸಮುದಾಯದ ಮುಖಂಡ ಸುರೇಶ ಸೇಠ್ ಜಾಂಗಡ, ಮುಖ್ಯಾಧಿಕಾರಿ ಪ್ರವೀಣ್ ಭೋಗಾರ್, ಅಶೋಕಗೌಡ ಪಾಟೀಲ್, ಮಹಾಂತೇಶ ಪಾಟೀಲ್, ಹನುಮಂತಪ್ಪ ಕಂದಗಲ್, ರಾಜು ಮಾಲಿಪಾಟೀಲ್, ಲಿಂಗಪ್ಪ ಹಣಿಗಿ, ಅನಿಲಕುಮಾರ ಬುಶೆಟ್ಟಿ, ನ್ಯಾಮತ್ ಖಾದ್ರಿ, ಜವರಿಸೇಠ್, ಚೇತನಕುಮಾರ ಬಾಗಲಕೋಟ. ಜೋಸೆಫ್ ಇರ್ಲಾ, ನವನೀತ ಜೈನ್ ಹಾಗೂ ಮಹಿಳೆಯರು ಸೇರಿದಂತೆ ಇತರರಿದ್ದರು.

# ಮುಂದಿನ 5 ದಿನ ಬಿಸಿಗಾಳಿ, ಭಾರಿ ಮಳೆ: ದೇಶದ ಹವಾಮಾನ ಬಗ್ಗೆ IMD ಎಚ್ಚರಿಕೆ!



ನವದೆಹಲಿ ಮೇ 22– ಕಳೆದ ಕೆಲ ದಿನಗಳಿಂದ ರಾಜಧಾನಿ ಬೆಂಗಳೂರು ಸೇರಿದಂತೆ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ವ್ಯಾಪಕ ಮಳೆಯಾಗುತ್ತಿದೆ. ಮುಂದಿನ ಐದು ದಿನಗಳವರೆಗೆ ಕರ್ನಾಟಕ ಜೊತೆಗೆ ದೇಶಾದ್ಯಂತ ಬಹು–ಅಪಾಯದ ಎಚ್ಚರಿಕೆಯನ್ನು ಭಾರತೀಯ ಹವಾಮಾನ ಇಲಾಖೆ (IMD) ನೀಡಿದೆ.

ವಿಶೇಷವಾಗಿ ವಾಯುವ್ಯ ಭಾರತದಲ್ಲಿ ತೀವ್ರ ಶಾಖದ ಅಲೆಗಳ ಪರಿಸ್ಥಿತಿಗಳು, ಧೂಳಿನ ಬಿರುಗಾಳಿಗಳು ಮತ್ತು ರಾತ್ರಿ ವೇಳೆ ಬಿಸಿಯ ಹವಾಮಾನ ಬಗ್ಗೆ ನಿವಾಸಿಗಳಿಗೆ ಎಚ್ಚರಿಕೆ ನೀಡಲಾಗಿದೆ. ಪಶ್ಚಿಮ ಕರಾವಳಿಯಲ್ಲಿ ಭಾರೀ ಮಳೆಯಾಗುವ ನಿರೀಕ್ಷೆಯಿದ್ದರೆ, ಗುಡುಗು ಸಹಿತ ಮಳೆ, ಮಿಂಚು ಮತ್ತು ಬಿರುಗಾಳಿಯೊಂದಿಗೆ ವ್ಯಾಪಕ ಮಳೆ ಪೂರ್ವ ಮತ್ತು ಮಧ್ಯ ಭಾರತದ ಮೇಲೆ ಪರಿಣಾಮ ಬೀರುತ್ತದೆ.

ಈ ವರ್ಷ ಮೊದಲ ಬಾರಿಗೆ, ಮೇ ತಿಂಗಳಲ್ಲಿ ವಾಯುವ್ಯ ಭಾರತದಾದ್ಯಂತ ತೀವ್ರ ಶಾಖದ ಅಲೆಯ ಪರಿಸ್ಥಿತಿಗಳು ವ್ಯಾಪಕವಾಗಿ ಹರಡಿವೆ, ಇದು ಸಾಮಾನ್ಯವಾಗಿ ವರ್ಷದ ಅತ್ಯಂತ ಬಿಸಿಯಾದ ತಿಂಗಳುಗಳಲ್ಲಿ ಒಂದಾಗಿದೆ. ಆದಾಗ್ಯೂ, ಮೇ ತಿಂಗಳಲ್ಲಿ ಇಲ್ಲಿಯವರೆಗೆ, ಪಶ್ಚಿಮ ಭಾರತ ಭಾಗದಲ್ಲಿ ಹವಾಮಾನವು ಸಾಮಾನ್ಯಕ್ಕಿಂತ ಸ್ವಲ್ಪ ಸೌಮ್ಯವಾಗಿದ್ದು, ಇದು ವ್ಯಾಪಕ ಮಳೆಗೆ ಕಾರಣವಾಗಿದೆ.

ಹರಿಯಾಣ, ಚಂಡೀಗಢ, ದೆಹಲಿ, ಜಮ್ಮು ಮತ್ತು ಕಾಶ್ಮೀರ, ಲಡಾಖ್, ಮಧ್ಯಪ್ರದೇಶ, ಪಂಜಾಬ್ ಮತ್ತು ರಾಜಸ್ಥಾನದ ಪ್ರತ್ಯೇಕ ಪ್ರದೇಶಗಳಲ್ಲಿ ಮೇ 24 ರವರೆಗೆ ಶಾಖದ ಅಲೆಯ ಪರಿಸ್ಥಿತಿ ಮುಂದುವರಿಯುವ ಸಾಧ್ಯತೆಯಿದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ. ಹೆಚ್ಚುವರಿಯಾಗಿ, ರಾಜಸ್ಥಾನ, ಹರಿಯಾಣ, ಚಂಡೀಗಢ, ದೆಹಲಿ, ಜಮ್ಮು ಮತ್ತು ಕಾಶ್ಮೀರ ಮತ್ತು ಪಂಜಾಬ್‌ನ ಪ್ರತ್ಯೇಕ ಪ್ರದೇಶಗಳಲ್ಲಿ ಬೆಚ್ಚಗಿನ ರಾತ್ರಿ ತಾಪಮಾನವನ್ನು ನಿರೀಕ್ಷಿಸಲಾಗಿದೆ. ಒಡಿಶಾದ ಪ್ರತ್ಯೇಕ ಸ್ಥಳಗಳಲ್ಲಿ ಬಿಸಿ ಮತ್ತು ಆರ್ದ್ರತೆಯ ಪರಿಸ್ಥಿತಿಗಳು ಸಹ ಕಂಡುಬರುವ ಸಾಧ್ಯತೆಯಿದೆ.

ವಾಯವ್ಯ ಪ್ರದೇಶದಲ್ಲಿ ಗುಡುಗು, ಮಿಂಚು ಮತ್ತು ಗಂಟೆಗೆ 40–50 ಕಿ.ಮೀ ವೇಗದ ಗಾಳಿ ಬೀಸಬಹುದು, ವಿಶೇಷವಾಗಿ ಜಮ್ಮು ಮತ್ತು ಕಾಶ್ಮೀರ, ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶ ಸೇರಿದಂತೆ ಪಶ್ಚಿಮ ಹಿಮಾಲಯದಲ್ಲಿ. ವಾಯುವ್ಯ ಭಾರತದ ಬಯಲು ಪ್ರದೇಶಗಳು ಸಹ ಪರಿಣಾಮ ಬೀರಲಿದ್ದು, ಮುಂದಿನ ಎರಡು ದಿನಗಳಲ್ಲಿ ಪಶ್ಚಿಮ ರಾಜಸ್ಥಾನದಲ್ಲಿ ಧೂಳಿನ ಬಿರುಗಾಳಿ (ಗಂಟೆಗೆ 40–50 ಕಿ.ಮೀ/ಗಂ) ಬೀಸುವ ಸಾಧ್ಯತೆಯಿದೆ.

ಮೂರು ದಿನಗಳಲ್ಲಿ ಗರಿಷ್ಠ ತಾಪಮಾನ ಹೆಚ್ಚಾಗುವುದಿಲ್ಲ ಎಂದು ಐಎಂಡಿ ಹೇಳಿದೆ. ಆದಾಗ್ಯೂ, ಮುಂದಿನ ನಾಲ್ಕು ದಿನಗಳಲ್ಲಿ ವಾಯುವ್ಯ ಮತ್ತು ಮಧ್ಯ ಭಾರತದಲ್ಲಿ ತಾಪಮಾನವು 2–3ಲಿ ಸೆಲ್ಸಿಯಷ್ಟು ಕಡಿಮೆಯಾಗುವ ನಿರೀಕ್ಷೆಯಿದೆ.

ಇದಲ್ಲದೆ, ದಕ್ಷಿಣ ಮತ್ತು ಪೂರ್ವ ಭಾರತದಲ್ಲಿನ ತೀವ್ರ ಹವಾಮಾನ ಘಟನೆಗಳ ಮೇಲೆ ಬಹು ಹವಾಮಾನ ವ್ಯವಸ್ಥೆಗಳು ಪ್ರಭಾವ ಬೀರುತ್ತಿವೆ. ಇವುಗಳಲ್ಲಿ ಉತ್ತರ ಕರ್ನಾಟಕ ಮತ್ತು ಗೋವಾದ ಆಚೆ ಪೂರ್ವ–ಮಧ್ಯ ಅರೇಬಿಯನ್ ಸಮುದ್ರದ ಮೇಲೆ ಮೇಲ್ಮಟ್ಟದ ವಾಯು ಚಂಡಮಾರುತದ ಪ್ರಸರಣ, ಅದೇ ಪ್ರದೇಶದಲ್ಲಿ ರೂಪುಗೊಳ್ಳುವ ಕಡಿಮೆ ಒತ್ತಡದ ಪ್ರದೇಶ ಮತ್ತು ಉತ್ತರ ಕರ್ನಾಟಕದಿಂದ ಕರಾವಳಿ ಆಂಧ್ರಪ್ರದೇಶದವರೆಗೆ ವಿಸ್ತರಿಸಿರುವ ತಗ್ಗು ಪ್ರದೇಶ ಸೇರಿದೆ.

ಮುಂದಿನ ಮೂರು ದಿನಗಳಲ್ಲಿ ಕರ್ನಾಟಕ, ಮಹಾರಾಷ್ಟ್ರ, ಗೋವಾ, ಗುಜರಾತ್, ಆಂಧ್ರಪ್ರದೇಶ, ತಮಿಳುನಾಡು ಮತ್ತು ಪುದುಚೇರಿಯಲ್ಲಿ ಅತ್ಯಂತ ಭಾರೀ ಮಳೆ, ಗುಡುಗು ಸಹಿತ ಮಳೆ ಮತ್ತು ಮಿಂಚನ್ನು ತರುವ ನಿರೀಕ್ಷೆಯಿದೆ. ಈಶಾನ್ಯ ಮತ್ತು ಪೂರ್ವ ಪ್ರದೇಶಗಳಲ್ಲಿ ಸಹ ಗಣನೀಯ ಪ್ರಮಾಣದಲ್ಲಿ ವಿಪರೀತ ಮಳೆಯಾಗುತ್ತಿದೆ. ನೈಋತ್ಯ ಮುಂಗಾರು ಮೇ 27 ರ ಬದಲು ಇದೇ ವಾರ ಮೇ 24–25ರಂದು ಭಾರತವನ್ನು ತಲುಪುವ ನಿರೀಕ್ಷೆಯಿದೆ.

# ಹಳ್ಳಿಗಳಲ್ಲಿ ಸರ್ವರ್ ಸಮಸ್ಯೆ, ಗಣತಿಯಲ್ಲಿ ಮಕ್ಕಳನ್ನು ಕೈ ಬಿಟ್ಟು ಜಾತಿಗಣತಿ – ಮಹಾಂತೇಶ್ ಭವಾನಿ

ಜನವಾದಿ ವಾರ್ತೆ



ದೇವದುರ್ಗ ಮೇ 22– ಗೌರವನಿತ್ವ ನ್ಯಾಯಮೂರ್ತಿ ಡಾ. ಎಚ್.ಎನ್ ನಾಗಮೋಹನ ದಾಸ್ ಏಕ ಸದಸ್ಯ ವಿಚಾರಣಾ ಆಯೋಗದಿಂದ ಸಮಾಜ ಕಲ್ಯಾಣ ಇಲಾಖೆ ಮೂಲಕ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ 2025ರ ಇದೇ ತಿಂಗಳ ಐದನೇ ತಾರೀಖಿನಿಂದ ಆರಂಭಗೊಂಡಿದ್ದು ಜಾತಿಗಳ ಸಮೀಕ್ಷೆಗಾಗಿ ಮನೆಮನೆಗೆ ಭೇಟಿ ನೀಡುತ್ತಿರುವ ಅಧಿಕಾರಿಗಳು ಜಾತಿ ಗಣತಿ ಪ್ರಾರಂಭದ ದಿನಗಳಿಂದ ಇಲ್ಲಿಯವರೆಗೆ ಸಮಸ್ಯೆ, ಮತ್ತೆಜಾತಿಗಣತಿ ಮಾಡುತ್ತಿದ್ದರು, ಇನ್ನು ಕೆಲ ಹಳ್ಳಿಗಳಲ್ಲಿ ಸಂಪೂರ್ಣ ಸರ್ವರ್ ಸಮಸ್ಯೆಗಳಿಂದ ಜಾತಿಗಣತಿಗೆ ಬ್ರೇಕ್ ಬಿದ್ದಂತಾಗಿದೇ ಜೊತೆಗೆ, ಜಾತಿ ಗಣತಿಯಲ್ಲಿ ಕೆಲ ಮಕ್ಕಳನ್ನು ಕೈ ಬಿಟ್ಟು ಜಾತಿಗಣತಿ ಮಾಡಲಾಗಿದೆ, ಇನ್ನು ಕೆಲ ಮಕ್ಕಳು, ಹಾಗೂ ವಯಸ್ಕರ, ರೇಷನ್ ಕಾರ್ಡ್, ಆಧಾರ್ ಕಾರ್ಡ್ ಇಲ್ಲಾ, ಇನ್ನು ಕೆಲವೊಬ್ಬರಲ್ಲಿ ಎಲ್ಲ ದಾಖಲೆಗಳಿದ್ದರು ಅಪ್ಲೋಡ್ ಆಗ್ತಾ ಇಲ್ಲಾ, ಇನ್ನು ಕೆಲ ಹಳ್ಳಿಗಳಿಗೆ ಅಧಿಕಾರಿಗಳು ಭೇಟಿ ನೀಡಿಲ್ಲ, ಕೂಡಲೇ ಸಂಬಂಧಪಟ್ಟ ಇಲಾಖೆಗಳು ಜಾತಿಗಣತಿದಾರರಿಗೆ ಮಾಹಿತಿ ಕೊಟ್ಟು ಗಣಕೆಯಿಂದ ಹೊರಗುಳಿರುವ ಕರ್ನಾಟಕದಲ್ಲಿ ನಡೆಯುತ್ತಿರುವ ಒಳ ಮೀಸಲಾತಿಯ 101 ಜಾತಿಯ ಯಾವುದೇ ಒಂದು ವ್ಯಕ್ತಿಯು ಕೂಡಾ ಗಣತಿಯಿಂದ ಹೊರಗುಳಿಯುಬಾರದು, ಇದರಿಂದ ವಿಶೇಷವಾಗಿ ಜನಗಣತಿಯಿಂದ ಹೊರಗುಳಿಯುವ ಕೆಳವಾದಿ ಜಾತಿಗಳ ಕುಟುಂಬಗಳ ಸದಸ್ಯರನ್ನು ತಾಂತ್ರಿಕ ಸಮಸ್ಯೆಗಳಿಂದ ಹೊರಗೊಳಿಸಿದಂತೆ ಮಕ್ಕಳ ರೇಷನ್ ಕಾರ್ಡ್,ಆಧಾರ್ ಕಾರ್ಡ್, ಮತ್ತು ಬೇರೆ ಬೇರೆ ಊರುಗಳಿಗೆ ಹೋಗಿರುವ ಕುಟುಂಬಗಳ ಜನರನ್ನು ಜಾತಿಗಳು ಸೇರಿಸಿ ಜಾತಿ ಗಣತಿಯಲ್ಲಿ ಹೊರಗೋಳಿಯದಂತೆ ಎಚ್ಚೆತ್ತು ಕೊಳ್ಳಬೇಕು ಎಂದು ಛಲವಾದಿ ಮಹಾ ಸಭಾದ ತಾಲೂಕು ಅಧ್ಯಕ್ಷ ಮಹಾಂತೇಶ್ ಭವಾನಿ ಪತ್ರಿಕಾ ಪ್ರಕಟಣೆ ಮೂಲಕ ವ್ಯಕ್ತಪಡಿಸಿದರು.

# ಆರೆಸ್ಸೆಸ್ ತೊರೆದ ನಂತರದ ನನ್ನ ಪಯಣ

1975ರ ಫೆಬ್ರವರಿಯಲ್ಲಿ ನಾನು ಆರೆಮ್ಮೆಸ್ ಬಿಟ್ಟು, ಅದೇ ಇಲಾಖೆಯ ಟೆಲಿಫೋನ್ಸ್ ವಿಭಾಗದಲ್ಲಿ ಕೆಲಸಕ್ಕೆ ಸೇರಿದೆ. ಆ ವರ್ಷದ ಜುಲೈಯಲ್ಲಿ ಇಂದಿರಾ ಗಾಂಧಿ ದೇಶದ ಮೇಲೆ ತುರ್ತುಪರಿಸ್ಥಿತಿ ಹೇರಿದರು. ದೇಶಾದ್ಯಂತ ಭಾರೀ ಅಲ್ಲೋಲ ಕಲ್ಲೋಲ ಉಂಟಾಯಿತು. ರಾಜ್ಯದಲ್ಲಿ ಸಹ, ಉತ್ತರ ಭಾರತದಷ್ಟು ಅಲ್ಲವಾದರೂ, ಎಮರ್ಜೆನ್ಸಿಯ ಪ್ರಭಾವ ಗೋಚರಿಸಿತು, ಇಲ್ಲೂ ಅನೇಕರ ಬಂಧನಗಳಾದವು. ಆದರೂ ದೇವರಾಜ ಅರಸರಿಂದಾಗಿ, ಇಂದಿರಾ ಅವರ 20 ಅಂಶದ ಕಾರ್ಯಕ್ರಮ, ಸಾಲ ಮನ್ನಾ ಮುಂತಾದವುಗಳಿಂದ ರಾಜ್ಯದ ಬಡಜನತೆಗೆ ಸಾಕಷ್ಟು ಒಳ್ಳೆಯದೂ ಆಯಿತು ಎಂದು ಇತಿಹಾಸ ದಾಖಲಿಸಿದೆ.



(“ನಾನು ಭರ್ತಿ ಎಂಟು ವರ್ಷದ ಆರೆಸ್ಸೆಸ್ ಸಹವಾಸದಿಂದ ಶಾಶ್ವತವಾಗಿ ಬಿಡಿಸಿಕೊಂಡೆ. ಅಷ್ಟೇ ಅಲ್ಲ, ದೇವರು–ದೇವಸ್ಥಾನ–ಪೂಜೆ–ಸಂಧ್ಯಾವಂದನೆ–ಜನಿವಾರ ಎಲ್ಲದರಿಂದಲೂ ಬಿಡುಗಡೆಗೊಂಡು ಒಂದು ರೀತಿ ನಿರ್ವಾಣವಾದೆ. ಸಂಕುಚಿತ ಅರ್ಥದ ಧರ್ಮ ಜಾತಿ ಎಲ್ಲವನ್ನೂ ತೊರೆದು ಮನುಷ್ಯ ಧರ್ಮ ಮನುಷ್ಯ ಜಾತಿಗೆ ಸೇರಿಬಿಟ್ಟೆ. ಅದು 1971, ನನಗಾಗ ಹತ್ತೊಂಬತ್ತು ವರ್ಷ ವಯಸ್ಸು. ನಂತರದ ಎರಡು ವರ್ಷ ತಲೆಯೊಳಗೆ ಕೊತಕೊತ ಕುದಿತ. ಪ್ರಶ್ನೆಗಳು ಪ್ರಶ್ನೆಗಳು ಪ್ರಶ್ನೆಗಳು. ಈ ಹುಡುಕಾಟದ ಫಲವಾಗಿ ನನಗೆ ಧುತ್ತೆಂದು ಸಿಕ್ಕಿದ್ದೇ ಮಾವೋವಾದಿ ಧಾರೆಯ ಕಮ್ಯೂನಿಸಂ ” ಮೇ 7ರ ಜೋಳಿಗೆಯ ನನ್ನ ಆರೆಸ್ಸೆಸ್ ದಿನಗಳು ಬರಹದಲ್ಲಿ ಈ ಮೇಲಿನಂತೆ ಬರೆದಿದ್ದೆ. ಅದನ್ನೀಗ ಸ್ವಲ್ಪ ಮುಂದುವರಿಸೋಣ). 1971ರಿಂದ ಎರಡು ವರ್ಷ ಹಾಗೆ ನನ್ನ ಸುತ್ತಲಿನ ಸಮಾಜದ ಆಗುಹೋಗುಗಳ ಕಡೆ ಗಮನ ಹರಿಯುತ್ತಿತ್ತು. ಯುವರಾಜ ಕಾಲೇಜಿನಲ್ಲಿ ಎಂ.ವಿ.ಶ್ರೀಧರ ಎಂಬ ಮ್ಯಾಥಮ್ಯಾಟಿಕ್ಸ್ ಉಪನ್ಯಾಸಕರಿದ್ದರು. ಅವರು ಸಮಾಜವಾದಿಯೋ, ಗಾಂಧಿವಾದಿಯೋ ಆಗಿದ್ದರು; ಸದಾ ಅಚ್ಚ ಬಿಳಿ ಖಾದಿಯ ಸಾದಾ ಪ್ಯಾಂಟ್ ಶರ್ಟನ್ನೇ ತೊಡುತ್ತಿದ್ದರು. ಅವರು ದೇಶದ ಆಗುಹೋಗುಗಳನ್ನು ಕುರಿತು ತರಗತಿಯಲ್ಲಿ ಆಗೀಗ ಒಂದಷ್ಟು ಹೊತ್ತು ಮಾತಾಡುತ್ತಿದ್ದರು. ಅದೆಲ್ಲವೂ ಪೂರ್ತಿ ಅರ್ಥ ಆಗುತ್ತಿರಲಿಲ್ಲವಾದರೂ ಅಸ್ಪಷ್ಟವಾಗಿ ನನ್ನ ಮನಸ್ಸಿನಲ್ಲಿ ನಡೆಯುತ್ತಿದ್ದ ತುಮುಲವನ್ನೇ ಪುಷ್ಟಿಗೊಳಿಸುತ್ತಿತ್ತು. 1973ರಲ್ಲಿ ಬಿಎಸ್ಸಿ ಮುಗಿಸಿದೆ. ಆಗಲೇ ಮೈಸೂರಿನಲ್ಲಿ ಅಂಚೆ–ತಂತಿ ಇಲಾಖೆಯ ಆರ್.ಎಂ.ಎಸ್. ವಿಭಾಗದಲ್ಲಿ ಖಾಯಂ ಉದ್ಯೋಗ ಸಿಕ್ಕಿತು. ಒಳ್ಳೆಯ ಕೆಲಸಗಾರನೆಂಬ ಮೆಚ್ಚುಗೆಯನ್ನೂ ಗಳಿಸಿದೆ. ಅಲ್ಲಿ ನೌಕರರ ಯೂನಿಯನ್ನಿನ ಚಟುವಟಿಕೆ ಬಿರುಸಾಗಿ ನಡೆಯುತ್ತಿತ್ತು. ರಘೋತ್ತಮನ್ ಎಂಬ ನಿಷ್ಠಾವಂತ ಕಮ್ಯೂನಿಸ್ಟ್ ಮುಂದಾಳೊಬ್ಬರು ಆ ಕಚೇರಿಯ ಮುಖ್ಯರಾಗಿದ್ದರು. ಅವರಿಂದಲೂ ಯೂನಿಯನ್ ವಿಚಾರದಲ್ಲಿ, ದೇಶ ಮತ್ತು ಜಗತ್ತಿನ ಪರಿಸ್ಥಿತಿಯ ವಿಚಾರದಲ್ಲಿ ಸಾಕಷ್ಟು ತಿಳವಳಿಕೆ ದೊರೆಯಿತು. ಯೂನಿಯನ್ ಮೀಟಿಂಗುಗಳಲ್ಲಿ ನಾನೂ ಬಿರುಸಾಗಿಯೇ ಪಾಲ್ಗೊಳ್ಳುತ್ತಿದ್ದೆ. ಅವು 1974ರ ದೇಶವ್ಯಾಪಿ ಐತಿಹಾಸಿಕ ರೈಲ್ವೆ ಮುಷ್ಕರ ಹಾಗೂ ಇಂದಿರಾ ಗಾಂಧಿಯ ತುರ್ತುಪರಿಸ್ಥಿತಿ (ಎಮರ್ಜೆನ್ಸಿ) ಇವುಗಳಿಗಿಂತ ಮುಂಚಿನ ವರ್ಷಗಳು: ದೇಶದಲ್ಲಿ ಸಾಮಾಜಿಕ–ಆರ್ಥಿಕ–ರಾಜಕೀಯ ಕ್ಷೋಭೆಯ ಚಂಡಮಾರುತ ರೂಪು ತಳೆಯುತ್ತಿತ್ತು. ಇದೆಲ್ಲ ನಮ್ಮ ಯೂನಿಯನ್ ಮೀಟಿಂಗುಗಳಲ್ಲೂ ಅಷ್ಟಿಷ್ಟು ಪ್ರತಿಫಲನಗೊಳ್ಳುತ್ತಿತ್ತು. (ಆಗ ನಾನಿನ್ನೂ ಕಮ್ಯೂನಿಸ್ಟ್ ಆಗಿರಲಿಲ್ಲ! ಬದಲಿಗೆ, ಆರೆಸ್ಸೆಸ್ ತೊರೆದಿದ್ದರೂ ಅದರಿಂದ ಹರಿದುಬಂದಿದ್ದ ಕಮ್ಯೂನಿಸ್ಟ್ ವಿರೋಧವೇ ಮನಸ್ಸಿನೊಳಗೆಲ್ಲೋ ಹುದುಗಿ ಕೂತಿತ್ತು).

ಅಲ್ಲಿ ಗಂಗಾಧರ ಮೂರ್ತಿ ಮತ್ತು ಲಕ್ಷ್ಮೀನಾರಾಯಣ ಎಂಬ ಇಬ್ಬರು ಹಿರಿಯ ಸಹೋದ್ಯೋಗಿಗಳು ನನ್ನ ಮನೋಭಾವ, ಪ್ರವೃತ್ತಿಗಳನ್ನು ಗಮನಿಸುತ್ತಿದ್ದರು ಅನ್ನಿಸುತ್ತೆ. ಗಂಗಾಧರ ಮೂರ್ತಿಯವರು ಆರೆಮ್ಮೆಸ್ನಲ್ಲಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುತ್ತ ಮೈಸೂರು ವಿವಿಯಿಂದ ಇಂಗ್ಲಿಷ್ನಲ್ಲಿ ಎಂಎ ಮಾಡಿದರು. ನಂತರ ಗೌರಿಬಿದನೂರಿನ ನ್ಯಾಶನಲ್ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕ, ಪ್ರೊಫೆಸರ್ ಆಗಿ ನಿವೃತ್ತಿ ಹೊಂದಿ, 2022ರ ಸೆಪ್ಟೆಂಬರಿನಲ್ಲಿ ತೀರಿಕೊಂಡರು. ಅವರು ಕರ್ನಾಟಕದ ಬಹುತೇಕ ಜನಪರ ಚಳವಳಿಗಳ ಜೊತೆ, ವಿಶೇಷವಾಗಿ ದಲಿತ ಸಂಘರ್ಷ ಸಮಿತಿ ಜೊತೆ ಸಕ್ರಿಯ ಸಂಬಂಧ ಇಟ್ಟುಕೊಂಡಿದ್ದರಲ್ಲದೆ, ಅದಕ್ಕೆ ಪೂರಕವಾಗಿ ಅನೇಕ ಕೃತಿಗಳನ್ನು ಬರೆದರು ಹಾಗೂ ಕೆಲವು ಒಳ್ಳೆಯ ಕೃತಿಗಳನ್ನು ಇತರ ಭಾಷೆಗಳಿಂದ ಅನುವಾದಗಳನ್ನೂ ಮಾಡಿದರು. ನಾನು ಅವರನ್ನು ನನಗೆ ಜನಪರ ಚಳವಳಿಗಳ ಹಾದಿ ತೋರಿದವರು ಎಂದು ಪರಿಗಣಿಸಿದ್ದೇನೆ. ಅವರ ಬದುಕಿನ ಕೊನೆಯವರೆಗೂ ಅವರ ಮತ್ತು ನಮ್ಮ ಕುಟುಂಬಗಳ ಸ್ನೇಹಸಂಬಂಧ ಉಳಿದುಬಂದಿತು. ಅದು ಈಗಲೂ ಅವರ ಕುಟುಂಬದ ಜೊತೆ ಮುಂದುವರಿದಿದೆ. ಮೈಸೂರಿನ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾ ಸಂಸ್ಥೆ(ಸಿಎಫ್‌ಟಿಆರ್‌ಐ)ಯ ಪ್ರೊ. ವೀರ್ರಾಜು (ರಾಜು ಅಂತ ಎಲ್ಲರೂ ಕರೆಯುತ್ತಿದ್ದುದು) ಅವರು ಪ್ರತೀ ಭಾನುವಾರ ನಡೆಸುತ್ತಿದ್ದ ಸಣ್ಣದೊಂದು ಕಮ್ಯೂನಿಸ್ಟ್ ಅಧ್ಯಯನ ಕೂಟದಲ್ಲಿ ನನ್ನ ಈ ಇಬ್ಬರು ಹಿರಿಯ ಸಹೋದ್ಯೋಗಿಗಳೂ ಪಾಲ್ಗೊಳ್ಳುತ್ತಿದ್ದರು. ಅಲ್ಲಿಗೆ 1974ರ ಜನವರಿ–ಫೆಬ್ರವರಿಯ ಒಂದು ಭಾನುವಾರ ನನ್ನನ್ನೂ ಕರೆದೊಯ್ದರು. ಪ್ರೊ. ರಾಜು ಒಳ್ಳೆಯ ನುರಿತ ಕಮ್ಯೂನಿಸ್ಟ್ ತತ್ವಜ್ಞ ಮತ್ತು ಎಲೆಮರೆಯಂಥ ಸಂಘಟಕರಾಗಿದ್ದರು. ಅವರು ನನ್ನ ಬದುಕಿನ ವಿವರಗಳನ್ನು ಹಾಗೂ ನನ್ನ ಮನಸ್ಸನ್ನು ಕೊರೆಯುತ್ತಿದ್ದ ಪ್ರಶ್ನೆಗಳನ್ನೆಲ್ಲ ಕೇಳಿಸಿಕೊಂಡು, ಅದೆಲ್ಲದರ ಮೂಲ ಕಾರಣವನ್ನು ಸಮಾಧಾನದಿಂದ ನನಗೆ ವಿವರಿಸಿದರು. ಆ ಕಾರಣವೆಂದರೆ ನಮ್ಮನ್ನಾಳುತ್ತಿರುವ ಶೋಷಕ ವ್ಯವಸ್ಥೆ. ನಾನು ಅನುಭವಿಸಿದ ಸಮಸ್ಯೆಗಳಿಗೂ, ನನ್ನ ಸುತ್ತಲಿನ ಮತ್ತು ದೇಶದ ಎಲ್ಲ ಸಮಸ್ಯೆಗಳಿಗೂ ಹೇಗೆ ಈ ಶೋಷಕ ವ್ಯವಸ್ಥೆಯೇ ಮೂಲ ಕಾರಣ ಎನ್ನುವುದನ್ನು ಅವರು ಬಹಳ ಸರಳವಾಗಿ ನನಗೆ ಮನವರಿಕೆ ಮಾಡಿಕೊಟ್ಟರು. ಇದು ನನಗೆ ಸಂಪೂರ್ಣ ಒಪ್ಪಿಗೆಯಾಯಿತು. ಆದರೆ ಒಂದು ಸಂದೇಹ ಕಾಡಿತು: ಇದೆಲ್ಲ ಬಹಳ ಸರಿಯಾಗಿಯೇನೋ ಇದೆ. ಆದರೆ ಅವರು ಹೇಳುತ್ತಿರುವುದು ಕಮ್ಯೂನಿಸಂ! ? ಈ ಅಸಂಗತ ವಿರೋಧಾಭಾಸ ಮನಸ್ಸಿನಲ್ಲಿ ಒಂದಷ್ಟು ಕಾಲ ಬಹುಶಃ ಒಂದೆರಡು ದಿನ ಕಡೆಯಿತು. ಕೊನೆಗೆ, “ಹಾಗಿದ್ದರೆ ಕಮ್ಯೂನಿಸಮ್ಮೇ ಸರಿ. ಹಾಗಿದ್ದರಿಂದಲೇ ಅದನ್ನು ಆರೆಸ್ಸೆಸ್ ಇಷ್ಟು ಉಗ್ರವಾಗಿ ವಿರೋಧಿಸುತ್ತಿರುವುದು” ಎಂಬ ತಥ್ಯ ಮನವರಿಕೆ ಆಯಿತು. ಅಂದಿನಿಂದ ನಾನೂ ಕಮ್ಯೂನಿಸ್ಟ್ ಆಗಿಬಿಟ್ಟೆ. ಸ್ವಲ್ಪ ಸಮಯದೊಳಗೆ ಅದು ಮಾವೋವಾದಿ ಧಾರೆಯ ಕಮ್ಯೂನಿಸಂ ಎನ್ನುವುದೂ ಅರ್ಥವಾಯಿತು. ಆಲ್ ರೈಟ್! ಅದೇ ಆಗಲಿ, ನಾನೂ ಮಾವೋವಾದಿ ಧಾರೆಯ ಕಮ್ಯೂನಿಸ್ಟನೇ. (ಏನೀಗ?) ಪ್ರೊ. ರಾಜು, ಪ್ರೊ. ನರೇಂದ್ರ ಸಿಂಗ್, ಪ್ರೊ. ರಾಮಲಿಂಗಂ, ಡಾ. ಲಕ್ಷ್ಮೀನಾರಾಯಣ ಮುಂತಾಗಿ ಮೈಸೂರಿನ ಹಲವು ಮಂದಿ ಈ ಧಾರೆಯ ಕಮ್ಯೂನಿಸ್ಟರು ಸರಸ್ವತಿಪುರಂ ಪಕ್ಕದ ಕುಕ್ಕರಹಳ್ಳಿಯಲ್ಲಿ ಮಹದೇವಪ್ಪ ಸ್ಮಾರಕ ಮಾರ್ಕ್ಸ್‌ವಾದಿ ಗ್ರಂಥಾಲಯ ಎಂಬ ಚಿಕ್ಕ ಲೈಬ್ರೆರಿಯೊಂದನ್ನು ಆರಂಭಿಸಿದ್ದರು. ಅಲ್ಲಿ ಮಾರ್ಕ್ಸ್‌ವಾದದ್ದು ಮಾತ್ರವಲ್ಲದೆ ಇನ್ನೂ ಬೇರೆಬೇರೆ ವಿಚಾರಗಳ ಸಣ್ಣಸಣ್ಣ ಒಳ್ಳೊಳ್ಳೆಯ ಪುಸ್ತಕಗಳನ್ನು ಸಂಗ್ರಹಿಸಿದ್ದರು. ದಿನಕ್ಕೊಬ್ಬರು ಸಂಜೆ ಆರರಿಂದ ಎಂಟರವರೆಗೆ ಅದನ್ನು ನಿರ್ವಹಿಸಬೇಕಿತ್ತು. ನಾನೂ ವಾರದಲ್ಲಿ ಒಂದು ದಿನ ಅದನ್ನು ನೋಡಿಕೊಳ್ಳತೊಡಗಿದೆ. ಹೇಮಾ, ರತಿ ರಾವ್ ಮತ್ತಿತರರು ಅಲ್ಲಿಗೆ ಖಾಯಮ್ಮಾಗಿ ಭೇಟಿ ಕೊಡುತ್ತಿದ್ದರು. ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಉಪನ್ಯಾಸ ನೀಡಲು ಹೊರಗಿನಿಂದ ಬರುತ್ತಿದ್ದ ಅನೇಕ ವಿದ್ವಾಂಸರನ್ನು, ಹೆಸರಾಂತ ಹೋರಾಟಗಾರರನ್ನು ಲೈಬ್ರೆರಿಗೂ ಕರೆಸಲಾಗುತ್ತಿತ್ತು. ಆಗ ಮೈಸೂರಿನ ಅನೇಕ ಪ್ರಗತಿಪರ ಚಿಂತಕರು, ಹೋರಾಟಗಾರರು ಸಹ ಅಲ್ಲಿ ಸೇರುತ್ತಿದ್ದರು. ನಾವುನಾವೇ ಕೂಡ ದಿನವೂ ಏನಾದರೂ ಚರ್ಚೆ ಮಾಡುತ್ತಿರುತ್ತಿದ್ದೆವು. ಹೀಗೇ ದಿನಗಳು ಕಳೆದವು. 1974ರ ರೈಲ್ವೆ ಮುಷ್ಕರ ನಡೆದು, ಅದನ್ನು ಕೇಂದ್ರ ಸರ್ಕಾರ ಕ್ರೂರವಾಗಿ ಹತ್ತಿಕ್ಕಿದ್ದೂ ಆಯಿತು. ನಮ್ಮ ಆರೆಮ್ಮೆಸ್ ಕಚೇರಿ ರೈಲ್ವೆ ನಿಲ್ದಾಣದಲ್ಲೇ ಇದ್ದುದರಿಂದ ಅನೇಕ ಹಿರಿಯ ರೈಲ್ವೆ ನೌಕರರು ಪರಿಚಿತರೂ, ಸ್ನೇಹಿತರೂ ಆಗಿದ್ದರು. ಆ ಪೈಕಿ ಹಲಕೆಲವರು ಮುಷ್ಕರದ ಕಾರಣಕ್ಕೆ ಶಿಕ್ಷೆಗೂ ಒಳಗಾಗಿ, ಕೆಲಸ ಕಳೆದುಕೊಂಡರು. ಅವರಲ್ಲಿ ನಿವೃತ್ತಿಯ ಅಂಚಿನಲ್ಲಿದ್ದ ಒಬ್ಬ ಹಿರಿಯ ನಿಷ್ಠಾವಂತ ಯೂನಿಯನ್ ಮುಂದಾಳು ನನಗೆ ಚೆನ್ನಾಗಿ ನೆನಪಿದ್ದಾರೆ (ಅವರ ಹೆಸರು ಭಾಸ್ಕರನ್ ಅಂತ ಇದ್ದಿರಬೇಕು). ಬಹುಶಃ ಅವರದ್ದೆಲ್ಲ ಕೇಸು ಕೋರ್ಟುಗಳಲ್ಲಿ ನಡೆಯಿತು ಅಂತ ನೆನಪು. ಆ ಹಿರಿಯರಿಗಾಗಿ ನಾವೆಲ್ಲ ಪ್ರತಿ ತಿಂಗಳೂ ನಮ್ಮ ಸಣ್ಣ ಸಂಬಳದಲ್ಲೇ ಅಲ್ಪಸ್ವಲ್ಪ ಹಣ ಒಟ್ಟುಗೂಡಿಸಿ ಕೊಡುತ್ತಿದ್ದೆವು. ಆಗ ನನ್ನ ಸಂಬಳ 262ರೂ. 50 ಪೈಸೆ ಇತ್ತು! ಅದು ಮೂರನೇ ವೇತನ ಆಯೋಗದ ಶಿಫಾರಸಿನ ಪ್ರಕಾರ ಹೆಚ್ಚಳವಾಗಿದ್ದ ಮೊತ್ತ! ರಾಜ್ಯ ಸರ್ಕಾರದ ಪ್ರಥಮ ದರ್ಜೆ ಗುಮಾಸ್ತರಿಗೆ ಸರಿಸಮನಾದ ಹುದ್ದೆಯ ಸಂಬಳ ಅದು ಆಗ.

ದೇಶದೊಳಗೆ ಸಂಕ್ಷೋಭೆ ಮುಂದುವರಿಯಿತು. ಜಯಪ್ರಕಾಶ ನಾರಾಯಣರ “ನವ ನಿರ್ಮಾಣ ಕ್ರಾಂತಿ” ಚಳವಳಿ ಬಿರುಸು ಪಡೆಯಿತು. ಆಗ ದೇವರಾಜ ಅರಸರು ನಮ್ಮ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಅವರು 1974ರಲ್ಲಿ ಭೂ ಸುಧಾರಣಾ ಕಾಯ್ದೆ ಜಾರಿಗೆ ತಂದಿದ್ದರು. ದಲಿತ ಮತ್ತು ಹಿಂದುಳಿದ ವರ್ಗಗಳ ಏಳಿಗೆಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದರು. ಇಂತಹ ಹಲವು ಕಾರಣಗಳಿಂದಾಗಿ ನಮ್ಮ ರಾಜ್ಯದಲ್ಲಿ “ನವ ನಿರ್ಮಾಣ ಕ್ರಾಂತಿ” ಚಳವಳಿಯ ಪ್ರಭಾವ ಅಷ್ಟಾಗಿ ಇರಲಿಲ್ಲ ಅನ್ನಬಹುದು. ಇಲ್ಲಿ ಗಣನೀಯ ಸಂಖ್ಯೆಯಲ್ಲಿದ್ದ ಮತ್ತು ಸಾಕಷ್ಟು ಮಟ್ಟಿಗೆ ಪ್ರಭಾವಶಾಲಿಗಳೂ ಆಗಿದ್ದ ಸಮಾಜವಾದಿಗಳು ಸ್ವಲ್ಪ ಹೆಚ್ಚು ಸಕ್ರಿಯವಾಗಿದ್ದರು. 1975ರ ಫೆಬ್ರವರಿಯಲ್ಲಿ ನಾನು ಆರೆಮ್ಮೆಸ್ ಬಿಟ್ಟು, ಅದೇ ಇಲಾಖೆಯ ಟೆಲಿಫೋನ್ಸ್ ವಿಭಾಗದಲ್ಲಿ ಕೆಲಸಕ್ಕೆ ಸೇರಿದೆ. ಆ ವರ್ಷದ ಜುಲೈಯಲ್ಲಿ ಇಂದಿರಾ ಗಾಂಧಿ ದೇಶದ ಮೇಲೆ ತುರ್ತುಪರಿಸ್ಥಿತಿ ಹೇರಿದರು. ದೇಶಾದ್ಯಂತ ಭಾರೀ ಅಲ್ಲೋಲ ಕಲ್ಲೋಲ ಉಂಟಾಯಿತು. ರಾಜ್ಯದಲ್ಲಿ ಸಹ, ಉತ್ತರ ಭಾರತದಷ್ಟು ಅಲ್ಲವಾದರೂ, ಎಮರ್ಜೆನ್ಸಿಯ ಪ್ರಭಾವ ಗೋಚರಿಸಿತು, ಇಲ್ಲೂ ಅನೇಕರ ಬಂಧನಗಳಾದವು. ಆದರೂ ದೇವರಾಜ ಅರಸರಿಂದಾಗಿ, ಇಂದಿರಾ ಅವರ “20 ಅಂಶದ ಕಾರ್ಯಕ್ರಮ”, ಸಾಲ ಮನ್ನಾ ಮುಂತಾದವುಗಳಿಂದ ರಾಜ್ಯದ ಬಡಜನತೆಗೆ ಸಾಕಷ್ಟು ಒಳ್ಳೆಯದೂ ಆಯಿತು ಎಂದು ಇತಿಹಾಸ ದಾಖಲಿಸಿದೆ. ನಮ್ಮ ಲೈಬ್ರೆರಿಗೆ ಮತ್ತು ಅದರ ಮುಂದಾಳುಗಳಿಗೂ ಬಂಧನದ ಅಪಾಯ ಇತ್ತು. ಇದನ್ನು ಸ್ವಲ್ಪ ಮಟ್ಟಿಗಾದರೂ ನಿವಾರಿಸಿಕೊಳ್ಳುವ ಉದ್ದೇಶದಿಂದ, ಕಾಂಗ್ರೆಸ್ ಎಂಎಲ್ಸಿಯಾಗಿದ್ದ ಬಿ. ಸುಬ್ಬಯ್ಯ ಶೆಟ್ಟಿ ಎಂಬ ಸಮಾಜವಾದಿಗಳೊಂದಿಗೆ ಸೇರಿ, “ಸೋಷಲಿಸ್ಟ್ ಸ್ಟಡಿ ಸೆಂಟರ್” ಅಂತಲೋ ಏನೋ, ವೇದಿಕೆಯೊಂದನ್ನು ಸ್ಥಾಪಿಸಿ, ಅದರ ಮೂಲಕ ಕೆಲವು ಸಣ್ಣಪುಟ್ಟ ಚರ್ಚೆ ಮುಂತಾದುವನ್ನು ನಡೆಸಲಾಯಿತು. 1975ರಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸ್ಥಾಪನೆಯಾಯಿತು. ತುರ್ತುಪರಿಸ್ಥಿತಿ ಅವಧಿಯಲ್ಲೂ ಸಹ ಅದರ ಸಂಘಟನೆ ಮತ್ತು ಚಟುವಟಿಕೆಗಳು ನಿಧಾನವಾಗಿ ವಿಸ್ತರಿಸಿದವು. ಆದರೆ ಅದರ ಹೋರಾಟಗಳು ಬಿರುಸು ಪಡೆದಿದ್ದು ಎಮರ್ಜೆನ್ಸಿಯ ನಂತರ, ಅಂದರೆ 1977ರ ನಂತರ. ನೋಡನೋಡುತ್ತಿದ್ದಂತೆ ಅದು ರಾಜ್ಯವ್ಯಾಪಿಯಾಗಿ ಹಬ್ಬಿ ಬೇರೂರಿತು. ಇಂದು ಫ್ಯಾಸಿಸ್ಟ್–ಕಾರ್ಪೊರೇಟ್ ಕೋಮುವಾದ, ಬ್ರಾಹ್ಮಣವಾದಗಳೇ ರಾಜ್ಯದಲ್ಲಿ ಪ್ರಧಾನ ಧಾರೆಯಾಗಿದ್ದರೆ, ಅಂದು ಪ್ರಗತಿಪರ–ಜನಪರ ಚಿಂತನೆ ಮತ್ತು ಚಟುವಟಿಕೆಗಳೇ ರಾಜ್ಯದ ವಿಚಾರವಂತರ ಪ್ರಧಾನ ಧಾರೆಯಾಗಿದ್ದವು. ಅಂತಹ ಎಲ್ಲರೂ ದಲಿತ ಸಂಘರ್ಷ ಸಮಿತಿಯನ್ನು ಅಖಂಡವಾಗಿ ಬೆಂಬಲಿಸಿದರು. ದಸಂಸ ಅಲ್ಲದೆ, ಅದಕ್ಕೂ ಮೊದಲಿನಿಂದ ಕಮ್ಯೂನಿಸ್ಟ್ ಚಳವಳಿ ಮತ್ತು ಚಿಂತನೆಗಳೂ ಸಾಕಷ್ಟು ಪ್ರಭಾವ ಹೊಂದಿದ್ದವು. ಜೊತೆಗೆ ವಿಚಾರವಾದಿ ಚಳವಳಿಯೂ ತನ್ನ ಛಾಪು ಮೂಡಿಸಿತ್ತು, ಮೈಸೂರಿನ ಪ್ರೊ. ರಾಮಲಿಂಗಂ ಅವರು ಮುಂದೆ ಅಖಿಲ ಭಾರತ ರ್‍ಯಾಶನಲಿಸ್ಟ್ ಫೋರಂನ ರಾಷ್ಟ್ರೀಯ ಅಧ್ಯಕ್ಷರೂ ಆಗಿದ್ದರು. ದೇವನೂರ ಮಹಾದೇವ ಅವರ ಮುಂದಾಳತ್ವದಲ್ಲಿ ಸಮಾಜವಾದಿ ಯುವಜನ ಸಭಾ ಕೂಡ ಸಕ್ರಿಯವಾಗಿತ್ತು.

ಇದೆಲ್ಲದರ ಜೊತೆಗೆ, ಆ ಕಾಲಮಾನದಲ್ಲಿ ಜಗತ್ತಿನ ಅನೇಕ ಕಡೆಗಳಲ್ಲಿ ದಕ್ಷಿಣ ಆಫ್ರಿಕ ದೇಶದಲ್ಲಿ ವರ್ಣಭೇದ ನೀತಿ (ಅಪಾರ್ಥೇಡ್) ವಿರುದ್ಧ, ಪ್ಯಾಲೆಸ್ತೀನಿನಲ್ಲಿ ನರಸಂಹಾರಕ ಯಹೂದಿ ಜಿಯೋನಿಸಂನಿಂದ ವಿಮೋಚನೆಗಾಗಿ, ಫಿಲಿಪೀನ್ಸ್ ಮತ್ತು ಇರಾನಿನಲ್ಲಿ ಸರ್ವಾಧಿಕಾರಿಗಳಾಗಿದ್ದ ಮಾರ್ಕೋಸ್ ಮತ್ತು ಶಾ ವಿರುದ್ಧ, ಕೊರಿಯದಲ್ಲಿ ಅಮೇರಿಕದ ದುಷ್ಟ ಹಿತಾಸಕ್ತಿಗೋಸ್ಕರ ಕೃತಕವಾಗಿ ಉತ್ತರ–ದಕ್ಷಿಣ ಎಂದು ಮಾಡಿದ್ದ ವಿಭಜನೆಯ ವಿರುದ್ಧ ದೇಶದ ಐಕ್ಯತೆಗಾಗಿ ಹೀಗೆ ನಾನಾ ಹೋರಾಟಗಳ ಕಾರಣಕ್ಕೆ ತಲೆ ಮರೆಸಿಕೊಂಡ ಅಥವಾ ಗಡೀಪಾರಾದ ಯುವ ಮುಂದಾಳುಗಳೂ ಮೈಸೂರಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದರು. ಮೈಸೂರಿನ ಪ್ರಗತಿಪರ ವಲಯ ಇವರೊಂದಿಗೆ ಗಾಢವಾದ ಸೌಹಾರ್ದ ಸಂಬಂಧವನ್ನು ಹೊಂದಿತ್ತು ಹಾಗೂ ಆ ಹೋರಾಟಗಳಿಗೆ ಬೆಂಬಲವಾಗಿ ಮೈಸೂರಿನಲ್ಲೂ ಅನೇಕ ಪ್ರತಿಭಟನಾ ಪ್ರದರ್ಶನ, ಮೆರವಣಿಗೆ ಮುಂತಾದುವು ನಡೆಯುತ್ತಿದ್ದವು.

ನನ್ನ ಆರೆಸ್ಸೆಸ್ ದಿನಗಳು 1977ರ ನಂತರ ಎಲ್ಲ ಸಂಘಟನೆ–ವೇದಿಕೆಗಳೂ ಮತ್ತೊಮ್ಮೆ ಹುರಿಗೊಂಡು ನಿರಂತರ ಚಟುವಟಿಕೆಗಳಲ್ಲಿ ತೊಡಗಿಕೊಂಡವು. ದಲಿತ ಸಂಘರ್ಷ ಸಮಿತಿಯ ಆರಂಭಿಕ ವರ್ಷಗಳಂತೂ ಬಹುಮಟ್ಟಿಗೆ ರಕ್ತಸಿಕ್ತ ವರ್ಷಗಳಾಗಿದ್ದವು ಎಂದರೆ ತಪ್ಪಿಲ್ಲ. ಮೈಸೂರು, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ಊಳಿಗಮಾನ್ಯ ಬಲಾಢ್ಯ ಭೂಮಾಲೀಕ ಶಕ್ತಿಗಳು ಮೂರು–ನಾಲ್ಕು ಮಂದಿ ಮುಂಚೂಣಿ ಕಾರ್ಯಕರ್ತರ ಕೊಲೆ ಯತ್ನ ನಡೆಸಿ ಸಾಯಬಡಿದಿದ್ದರು. ಕೋಲಾರದಲ್ಲಿ ಕುಂಬಾರ ಶೇಷಗಿರಿಯಪ್ಪನ ಕೊಲೆ ಮತ್ತು ಅನಸೂಯಮ್ಮನ ಮೇಲಿನ ಸಾಮೂಹಿಕ ಅತ್ಯಾಚಾರ, ಭದ್ರಾವತಿಯಲ್ಲಿ ಪತ್ರೆ ಸಂಗಪ್ಪನ ಕೊಲೆ, ಶಿವಮೊಗ್ಗ ಜಿಲ್ಲೆಯ ತತ್ತೂರಿನಲ್ಲಿ ಮತ್ತು ಕೋಲಾರದಲ್ಲಿ ದಲಿತರಿಗೆ ಮಲ ತಿನ್ನಿಸಿದ್ದು, ಕೊಪ್ಪಳದ ಕುದುರೆಮೋತಿ ಹಳ್ಳಿಯಲ್ಲಿ ಲಿಂಗಾಯತ ಮಠಾಧಿಪತಿ ದಲಿತ ಮಹಿಳೆಯ ಬೆತ್ತಲೆ ಮೆರವಣಿಗೆ ಮಾಡಿಸಿದ್ದು ಮುಂತಾಗಿ ಲೆಕ್ಕವಿಲ್ಲದಷ್ಟು ದೌರ್ಜನ್ಯಗಳ ವಿರುದ್ಧ ಸಾಲುಸಾಲು ಹೋರಾಟಗಳು ನಡೆದವು. ಜೊತೆಗೆ ಕಾರ್ಮಿಕರ ಹೋರಾಟಗಳು, ಗೋಕಾಕ್ ಚಳವಳಿ ಮತ್ತಿತರ ಕನ್ನಡಪರ ಚಳವಳಿಗಳು, ವಿದ್ಯಾರ್ಥಿ ಹೋರಾಟಗಳು ಇವೆಲ್ಲದರಿಂದಾಗಿ 1970ರ ದಶಕ ಮತ್ತು 1980ರ ದಶಕದ ಆರಂಭದ ಕಾಲಘಟ್ಟದ ಮೈಸೂರಿನ ವಾತಾವರಣ ಒಂದು ರೀತಿಯಲ್ಲಿ ಚಳವಳಿಗಳ ಕುಲುಮೆಯಾಗಿತ್ತು ಎಂದರೆ ತಪ್ಪಾಗದು. ಆ ಅವಧಿಯ ನಿರಂತರವಾದ ಪ್ರಜಾಸತ್ತಾತ್ಮಕ, ಪ್ರಗತಿಪರ ಚಟುವಟಿಕೆ–ಚಳವಳಿ–ಹೋರಾಟಗಳ ಈ ಕುಲುಮೆ ನನ್ನನ್ನು ಹೋರಾಟಗಳ ನಿಟ್ಟಿನಲ್ಲಿ ಒಂದು ಮಟ್ಟಿಗೆ ಪಳಗಿಸಿತು ಎನ್ನಬಹುದು.

(ಕೃಪೆ : ಈದಿನಾ.ಕಾಂ)

– ಸಿರಿಮನೆ ನಾಗರಾಜ್

# ಮೊದಲನೇ ಪುಟದಿಂದ

## ರೈತರಿಂದ ರಸ್ತೆ ತಡೆ ನಡೆಸಿ ಪ್ರತಿಭಟನೆ

ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಕೊಂಡರು ಕೂಡ ಸ್ಪಂದನೆ ನೀಡುತ್ತಿಲ್ಲ. ಜೋಳ ಕೋಯ್ಲಿಮಾಡಿ 5 ತಿಂಗಳಾಗಿರುವುದರಿಂದ ತಾವು ಖರೀದಿ ಮಾಡದೆ ಇದ್ದಲ್ಲಿ ಜೋಳಕ್ಕೆ ಹುಳು ಹಿಡಿಯುತ್ತದೆ ಮಾರುಕಟ್ಟೆಯಲ್ಲಿ ಕೂಡ ರೈತರ ಜೋಳ ಮಾರಾಟವಾಗುವುದಿಲ್ಲ ಜಿಲ್ಲಾ ಉಸ್ತುವರಿ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ್ , ಜಿಲ್ಲೆಯ ಸಚಿವರಾದ ಎನ್.ಎಸ್.ಬೋಸರಾಜು ,ಶಾಸಕರಾದ ಹಂಪಯ್ಯನಾಯಕರವರು ಕೂಡ ರೈತರ ಸಮಸ್ಯೆಗಳ ಬಗ್ಗೆ ಸ್ಪಂದಿಸುತ್ತಿಲ್ಲ ಅದ್ದರಿಂದ ಟಿ.ಎ.ಪಿ.ಸಿ.ಎಂ.ಎಸ್. ಜೋಳ ಖರೀದಿ ಕೇಂದ್ರದಲ್ಲಿ 30 ಕ್ಕೂ ಹೆಚ್ಚು ರೈತರು ಟ್ರಾಕ್ಟರ್‌ಗಳಲ್ಲಿ ಜೋಳವನ್ನು ತಂದಿದ್ದು ಅವರ ಜೋಳವನ್ನು ತೂಕ ಮಾಡಿಕೊಂಡು ತಮ್ಮ ವಶದಲ್ಲಿ ಇಟ್ಟುಕೊಳ್ಳಿ ನಂತರ ಸರ್ಕಾರದ ಅದೇಶದ ನಂತರ ಗ್ರೀನ್ ಚೀಟಿ ನೀಡಿ ನಂತರ ಸರ್ಕಾರದ ಅದೇಶವಾದ ನಂತರ ಜೋಳ ಬೆಳೆದು ನೊಂದಾಯಿಸಿಕೊಂಡಿರುವ ಬಾಕಿ ಇರುವ ಎಲ್ಲಾ ರೈತರ ಜೋಳ ಖರೀದಿ ಮಾಡುವಂತೆ ಒತ್ತಾಯಿಸಿದರು.

ಜಿಲ್ಲಾ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರಾದ ಕೃಷ್ಣ ಮನವಿ ಸ್ವೀಕರಿಸಿ ಮಾತನಾಡಿ ಮಾನ್ವಿ ತಾಲೂಕಿನಲ್ಲಿ ಮುಂಗಾರು ಹಂಗಾಮಿನಲ್ಲಿ 2ಲಕ್ಷ ಆರು ಸಾವಿರದ ಆರನೂರು ಕ್ವಿಂಟಾಲ್ ಜೋಳ ಖರೀದಿಗೆ ತಾಲೂಕಿನ ರೈತರು ನೊಂದಾಯಿಸಿ ಕೊಂಡಿದ್ದು. 1ಲಕ್ಷ ಎಪ್ಪತ್ತೊಂದು ಸಾವಿರ ಕ್ವಿಂಟಾಲ್ ಜೋಳವನ್ನು ಇದುವರೆಗೂ ತಾಲೂಕಿನ ರೈತರಿಂದ ಖರೀದಿ ಮಾಡಲಾಗಿದ್ದು. 40ಸಾವಿರ ಕ್ವಿಂಟಾಲ್ ಜೋಳ ಖರೀದಿ ಬಾಕಿ ಇದೆ ಸರ್ಕಾರದಿಂದ ಅದೇಶ ಬಂದ ನಂತರ ರೈತರ ಜೋಳವನ್ನು ಖರೀದಿ ಮಾಡಲಾಗುವುದು. ರೈತರ ಮನವಿಯಂತೆ ಖರೀದಿ ಕೇಂದ್ರದಲ್ಲಿ ಗುಣಮಟ್ಟದ ಇದುವರೆಗೆ ಟ್ರಾಕ್ಟರ್ ನಲ್ಲಿ ತಂದ 30 ಕ್ಕೂ ಹೆಚ್ಚು ರೈತರ ಜೋಳವನ್ನು ತೂಕ ಮಾಡಿ ಟಿ.ಎ.ಪಿ.ಸಿ.ಎಂ.ಎಸ್. ಜೋಳ ಖರೀದಿ ಕೇಂದ್ರದಲ್ಲಿ ಇಟ್ಟುಕೊಳ್ಳಲಾಗುವುದು ಸರ್ಕಾರದ ಅದೇಶದ ಬಂದ ನಂತರ 30 ರೈತರಿಗೆ ಗ್ರೀನ್ ವೋಚ್ಚರ ನೀಡಲಾಗುವುದು ಎಂದು ಬರವಸೆ ನೀಡಿದ ನಂತರ ರೈತರು ಪ್ರತಿಭಟನೆಯನ್ನು ಹಿಂಪಡೆಯಲಾಯಿತು.

ಬಾಕ್ಸ್ ಐಟಮ್: ಜಿಲ್ಲಾ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರಾದ ಕೃಷ್ಣ ರೈತರು ತಮ್ಮ ಸಮಸ್ಯೆಗಳನ್ನು ಹೋಳಿಕೊಳ್ಳುತ್ತಿರುವಾಗ ನಗುತ್ತ ಇದ್ದುದ್ದ ರೈತರನ್ನು ಮತ್ತಷ್ಟು ಕೆರಳಿಸಿ ರೈತರ ಹಾಗೂ ಅಧಿಕಾರಿಯ ನಡುವೆ ಮಾತಿನ ಚಕಮಕಿಗೆ ಕಾರಣವಾಯಿತು.

ಬಾಕ್ಸ್ ಐಟಮ್: ತಾಲೂಕಿನ ರೈತರು ಜೋಳ ಖರೀದಿ ಮಾಡದೆ ಇರುವುದರಿಂದ ರಸ್ತೆಗಿಳಿದು ಪ್ರತಿಭಟನೆ ಮಾಡುತ್ತಿರುವ ಬಗ್ಗೆ ಸಿಂಧನೂರಿನ ಶಾಸಕ ಹಂಪನಗೌಡ ಬಾದರ್ಲಿ ತಿಳಿದುಕೊಂಡು ದೂರವಾಣಿ ಮೂಲಕ ರೈತ ಮುಖಂಡರ ಸಮಸ್ಯೆಗಳನ್ನು ಅಲಿಸಿ ಜಿಲ್ಲಾಧಿಕಾರಿಗಳೊಂದಿಗೆ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರೊಂದಿಗೆ ಮತ್ತು ಅಧಿಕಾರಿಗಳೊಂದಿಗೆ ಮಾತನಾಡಿ ಹತ್ತು ದಿನಗಳಿಂದ ಸರತಿ ಸಾಲಿನಲ್ಲಿ ಕಾಯುತ್ತಿರುವ 30ಕ್ಕೂ ಹೆಚ್ಚು ರೈತರ ಜೋಳವನ್ನು ಖರೀದಿ ಕೇಂದ್ರಗಳಲ್ಲಿ ತೆಗೆದುಕೊಳ್ಳುವಂತೆ ಮಾಡಿದರು ಹಾಗೂ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಹಿಂಗಾರಿ ಜೋಳವನ್ನು ಖರೀದಿ ಕೇಂದ್ರಗಳಲ್ಲಿ ಖರಿದಿ ಮಾಡುವ ವ್ಯವಸ್ಥೆ ಮಾಡಲಾಗುವುದು ಎಂದು ಬರವಸೆ ನೀಡಿದರು. ರೈತರು ಬೆಳಿಗ್ಗೆ 11ಗಂಟೆಯಿಂದ ಪ್ರತಿಭಟನೆ ನಡೆಸುತ್ತಿದ್ದರು ಕೂಡ ಮಾನ್ವಿ ಪಟ್ಟಣದಲ್ಲಿ ಇದ್ದರು ಕೂಡ ರೈತರ ಪ್ರತಿಭಟನೆ ಮಾಡುತ್ತಿರುವ ಸ್ಥಳಕ್ಕೆ ಆಗಮಿಸಿ ರೈತರ ಸಮಸ್ಯೆ ಅಲಿಸದ ಶಾಸಕ ಹಂಪಯ್ಯನಾಯಕ ರವರ ಬಗ್ಗೆ ರೈತರು ಅಕ್ರೋಶ ವ್ಯಕ್ತಪಡಿಸಿದರು.ತಾಲೂಕಿನ ರೈತರ ಸಮಸ್ಯೆಗಳಿಗೆ ಸ್ಪಂದಿಸಿದ ಸಿಂಧನೂರಿನ ಶಾಸಕ ಹಂಪನಗೌಡ ಬಾದರ್ಲಿ ರವರ ಬಗ್ಗೆ ರೈತರು ಮೆಚ್ಚುಗೆ ವ್ಯಕ್ತಪಡಿಸಿದರು.

ರೈತರ ಪ್ರತಿಭಟನೆ ಸಮಯದಲ್ಲಿ ಯಾವುದೆ ಆಹಿತಕರ ಘಟನೆಗಳು ನಡೆಯದಂತೆ ಸಿಂಧನೂರು ಗ್ರಾಮೀಣ ಡಿ.ವೈಎಸ್.ಪಿ. ಬಿ.ಎಸ್.ತಳವಾರ್ ಹಾಗೂ ಪಿ.ಐ. ಸೋಮಶೇಖರ ಕೆಂಚರೆಡ್ಡಿ ಹಾಗೂ ಪೊಲೀಸ್ ಅಧಿಕಾ- ರಿಗಳು ಅಗತ್ಯ ಭದ್ರತೆ ವ್ಯವಸ್ಥೆ ಮಾಡಿದರು.

ಬೆಳಿಗ್ಗೆ 11 ರಿಂದ 3 ಗಂಟೆಯವರೆಗೆ ರಸ್ತೆ ರೋಖೊ ನಡೆಸಿದರಿಂದ ವಾಹನ ಸಂಚಾರದಲ್ಲಿ ವ್ಯತ್ಯಾಯವಾಯಿತು.

ಕರ್ನಾಟಕ ರಾಜ್ಯ ಮಾರಾಟ ನಿಗಮದ ಜಿಲ್ಲಾ ವ್ಯವಸ್ಥಾಪಕರು ಹಾಗೂ ಮಾನ್ವಿ ತಾಲೂಕು ನೋಡಲ್ ಅಧಿಕಾರಿ ಆಶಿಕ್ ಅಲಿ, ತಹಸೀಲ್ದಾರ್ ಭೀಮರಾಯ ಸೋಮಸಮುದ್ರ, ಆಹಾರ ನಿರೀಕ್ಷಕರಾದ ದೇವರಾಜ,ಉಪತಹಸೀಲ್ದಾರ್ ವಿರುಪಣ್ಣ, ಮಾಜಿ ಶಾಸಕರಾದ ಗಂಗಾಧರ ನಾಯಕ, ಟಿ.ಎ.ಪಿ.ಸಿ.ಎಂ. ಎಸ್. ಅಧ್ಯಕ್ಷರಾದ ತಿಮ್ಮರೆಡ್ಡಿಭೋಗವಾತಿ,ಕಾರ್ಯದರ್ಶಿ ರಮೇಶ, ಕರವೇ. ತಾ.ಅಧ್ಯಕ್ಷರಾದ ಡಿ.ಬಸವನಗೌಡ, ಸೇರಿದಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಪ್ರ.ಕಾರ್ಯದರ್ಶಿ ಸೂಗುರಯ್ಯಸ್ವಾಮಿ ಆರ್.ಎಸ್.ಮಠ, ರೈತ ಮುಖಂಡರಾದ ಲಿಂಗರೆಡ್ಡಿ ಪಾಟೀಲ್, ದೊಡ್ಡ ಬಸವನಗೌಡ, ಶಂಕರಪ್ಪ, ಬಸವರಾಜ,ಶರಣಪ್ಪ ಗವಿಗಟ್ಟ,ವೆಂಕಟೇಶ ಕರಡಿಗುಡ್ಡ,ಶಂಕರಪ್ಪ, ಹಾಜಿಮಸ್ತಾನ್,ದುರ್ಗೇಶ್,ಚಾಮರಸ ಜಾನೆಕಲ್, ಹುಲಿಗೆಪ್ಪ,ಹನುಮಂತ ನಸ್ಲಪುರ್,ರವಿ ಸಂಗಪೂರ, ಹನುಮರೆಡ್ಡಿ, ಮುದ್ದಣ್ಣ ,ವೆಂಕಪ್ಪ ಕಾರಬಾರಿ, ದೊಡ್ಡದೇವೆಂದ್ರಪ್ಪ ಸೇರಿದಂತೆ ನೂರಾರು ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದರು.

## ಅಲ್ತಾಫ್ ರಂಗಮಿತ್ರ ಆರೋಪ

ಪ್ರಕರಣ ಸುಳ್ಳು ಎಂದು ಬಿಂಬಿಸಿದ್ದಾರೆ ಎಂದು ಅಹಿಂದ ಕಲಾವಿದರ ಒಕ್ಕೂಟದ ಮುಖಂಡ ಅಲ್ತಾಫ್ ರಂಗಮಿತ್ರ ಆರೋಪಿಸಿದರು.

ಅವರಿಂದು ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿ, ಕಳೆದ ವರ್ಷ ಜುಲೈನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಹೊರ ಗುತ್ತಿಗೆ ಕೆಲಸ ಮಾಡುತ್ತಿದ್ದ ಶ್ರೀದೇವಿ ಮತ್ತು ಸಿದ್ದಪ್ಪ ಇವರು ಸರ್ಕಾರದ ಧನ ಸಹಾಯಕ್ಕಾಗಿ ಕಲಾವಿದರಿಂದ ಹಣ ಪಡೆದುಕೊಂಡಿದ್ದರು, ಈ ಬಗ್ಗೆ ದೂರು ನೀಡಿ ತನಿಖೆ ನಡೆಸಲಾಗಿತ್ತು, ಲಂಚ ಪಡೆದಿದ್ದು ಅಪರಾಧವಾಗಿದ್ದು ಪ್ರಕರಣ ಪೊಲೀಸ್ ಠಾಣೆಯಲ್ಲಿ

ದೂರು ನೀಡಬಹುದಿತ್ತು, ಆದರೆ ದೂರು ನೀಡದೇ ಅವರನ್ನು ಕೆಲಸದಿಂದ ತೆಗೆಯಲಾಗಿದೆ, ಅವರಿಗೆ ಅಧಿಕಾರಿವಿದೆಯೇ ಎಂದು ಪ್ರಶ್ನಿಸಿದರು.

ಲಂಚ ಪಡೆದಿದ್ದಾರೆ ಎಂದು ಸುಳ್ಳು ಎಂದು ಹೇಳಿತ್ತಿದ್ದು ಆದರೆ 15 ಲಕ್ಷ ರೂ ಕಲಾವಿದರಿಂದ ಲಂಚ ಪಡೆದಿದ್ದಾರೆ ಎಂದು ಡಿಸಿಗೆ ಪತ್ರ ಬರೆದ ಬಳಿಕ ತನಿಖೆ ನಡೆಸಲಾಗಿದೆ, ಸಹಾಯಕ ಅಧಿಕಾರಿ ಮೇಲೆ ಏಕೆ ಕ್ರಮವಿಲ್ಲ ಎಂದು ದೂರಿದರು.

ತನಿಖೆ ಹಂತದಲ್ಲಿ ಇದೀಗ ವರ್ಗಾವಣೆಗೊಂಡಿದ್ದು, ಹಿಂದಿನ ಸಹಾಯಕ ನಿರ್ದೇಶಕರನ್ನು ಉಳಿಸುವ ಹುನ್ನಾರಾಗಿದೆ, ಯಾದಗಿರಿಯ ಜಿಲ್ಲೆಯ ಅಧಿಕಾರಿ ಪ್ರಭಾರಿ ವಹಿಸಿಕೊಂಡ ತಕ್ಷಣದಲ್ಲಿ ಈ ಪ್ರಕರಣಗಳಲ್ಲಿ ಕಾಳಜಿ ವಹಿಸಿಕೊಂಡು ಕಾರ್ಮಿಕ ಇಲಾಖೆಗೆ ಬೇಟಿ ನೀಡಿ ಶ್ರೀದೇವಿ, ಸಿದ್ದಪ್ಪರ ಮೇಲಿನ ಆರೋಪ ಸುಳ್ಳು ತಪ್ಪು ಮಾಡಿಲ್ಲವೆಂದು ಹೇಳಿದ್ದಾರೆ, ಆದರೆ ಹಿಂದಿನ ಸಹಾಯಕ ನಿರ್ದೇಶಕರು ಮಾಡಿದ ಆರೋಪವು ಸುಳ್ಳು ಎಂಬಂತೆ ಬಿಂಬಿಸಲು ಹೊರಟ್ಟಿದ್ದಾರೆ, ಇದೀಗ ಈ ಪ್ರಕರಣದ ಕುರಿತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕರಿಗೆ ದೂರು ನೀಡಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಿವಾನಂದ ಗೌಡ, ಬಸವರಾಜ ಇದ್ದರು.

# ದ್ವಿತೀಯ ಪಿಯು 3ನೇ ಪರೀಕ್ಷೆಗೆ ನೋಂದಾಯಿಸಿ ಪರೀಕ್ಷೆಗೆ ಹಾಜರಾಗಲು ಮನವಿ

ಜನವಾದಿ ವಾರ್ತೆ



ರಾಯಚೂರು ಮೆ 22- ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಪರೀಕ್ಷೆ-3ಕ್ಕೆ ನೋಂದಾಯಿಕೊಂಡು ಪರೀಕ್ಷೆಗೆ ಹಾಜರಾಗಬೇಕು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೊಟ್ಟೂರು ಬಸಪ್ಪ ಅವರು ಹೇಳಿದರು.

ಮೇ 22ರಂದು ಗುರುವಾರ ದಂದು ನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

2025 ದ್ವಿತೀಯ ಪಿಯುಸಿ ಪರೀಕ್ಷಾ-2ಕ್ಕೆ ಅವಕಾಶ ಕಲ್ಪಿಸಿದ್ದರಿಂದ ರಾಜ್ಯದಲ್ಲಿ 60,692 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅದರಂತೆ ರಾಯಚೂರು ಜಿಲ್ಲೆಯಲ್ಲಿ 6,788 ವಿದ್ಯಾರ್ಥಿಗಳ ಪೈಕಿ 1625 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಪ್ರತಿಶತ 23.09 ಫಲಿತಾಂಶ ಬಂದಿದೆ.

ರಾಜ್ಯ ಸರ್ಕಾರವು ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಮೂರನೇ ಪರೀಕ್ಷೆ-3ಯನ್ನು ಜೂನ್ 09 ರಿಂದ ಜೂನ್ 20ರವರೆಗೆ ನಡೆಸಲು ದಿನಾಂಕ ನಿಗದಿಪಡಿಸಿದೆ. ಆದ್ದರಿಂದ ಪರೀಕ್ಷೆಗೆ ನೋಂದಣಿ ಮಾಡಿಕೊಳ್ಳಲು ಮೇ 28 ಅಂತಿಮ ದಿನಾಂಕವಾಗಿದ್ದು, ಅನುತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳು ತಮ್ಮ ಮುಂದಿನ ಉತ್ತಮ ಭವಿಷ್ಯಕ್ಕಾಗಿ ವಿದ್ಯಭ್ಯಾಸ ಮುಂದುವರಿಸಬೇಕು ಎಂಬುದು ಘನ ರಾಜ್ಯ ಸರ್ಕಾರದ ಆಶಯವಾಗಿರುತ್ತದೆ.

ಪಾಲಕರಲ್ಲಿ ಮನವಿ: ವಿದ್ಯಾರ್ಥಿಗಳು ಓದಿನಲ್ಲಿ ಹಿಂದುಳಿಯುವುದು ಕೆಲವೊಮ್ಮೆ ಸಹಜ. ಕಡಿಮೆ ಅಂಕಗಳು ಬಂದಾಗ ಮತ್ತು ಪರೀಕ್ಷೆಯಲ್ಲಿ ಅನುತ್ತೀರ್ಣರಾದಾಗ ಯಾವುದೇ ಕಾರಣಕ್ಕೂ ಕುಗ್ಗಬಾರದು. ಈ ಬಗ್ಗೆ ಪಾಲಕರು ಮಕ್ಕಳಲ್ಲಿ ತಿಳಿ ಹೇಳಿ ಪರೀಕ್ಷೆ-3ಗೆ ರಾಯಚೂರು ಜಿಲ್ಲೆ ಎಲ್ಲಾ ವಿದ್ಯಾರ್ಥಿಗಳು ನೋಂದಾಯಿಸಿಕೊಂಡು ಪರೀಕ್ಷೆಗೆ ಹಾಜರಾಗುವಂತೆ ಆಯಾ ವಿದ್ಯಾರ್ಥಿಗಳ ಪೋಷಕರು ಮಕ್ಕಳಿಗೆ ಪೇರೇಪಿಸಬೇಕು ಎಂದು ಇದೆ ವೇಳೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ವಿದ್ಯಾರ್ಥಿಗಳ ಪಾಲಕರಲ್ಲಿ ಮನವಿ ಮಾಡಿದರು.

ಪ್ರಾಂಶುಪಾಲರಲ್ಲಿ ಮನವಿ: ವಿದ್ಯಾರ್ಥಿಗಳು ಓದಿನಲ್ಲಿ ಹಿಂದೆ ಬೀಳಲು ಕಾರಣ ಏನು? ಫಲಿತಾಂಶ ಕುಸಿಯಲು ವಾಸ್ತವವಾಗಿ ಗಂಭೀರ ಕಾರಣಗಳೇನು ಎಂಬುದು ಎಲ್ಲ ಪ್ರಾಂಶುಪಾಲರಿಗೆ ತಿಳಿದ ವಿಷಯವಾಗಿರುತ್ತದೆ. ಆದ್ದರಿಂದ ಎಲ್ಲ ಪ್ರಾಂಶುಪಾಲರು ಜಾಗೃತರಾಗಿ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಆಲೋಚಿಸಿ ಕಾರ್ಯತತ್ಪರರಾಗಬೇಕು. ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿಗಳನ್ನು 3ನೇ ಪರೀಕ್ಷೆಗೆ ನೋಂದಾಯಿಸಿ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗುವಂತೆ ಕ್ರಮವಹಿಸಬೇಕೆಂದು ಎಲ್ಲ ಪ್ರಾಂಶುಪಾಲರುಗಳಲ್ಲಿ ಮನವಿ ಮಾಡಿದರು.

2025ರ ಮಾರ್ಚನಲ್ಲಿ ಪರೀಕ್ಷೆ-1ಗೆ ಒಟ್ಟು 18,414 ವಿದ್ಯಾರ್ಥಿಗಳು ನೋಂದಾಯಿಸಿದ್ದು, ಈ ಪೈಕಿ 10,818 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಜಿಲ್ಲೆಯ ಪ್ರತಿಶತ ಫಲಿತಾಂಶವು ಶೇ.58.75 ಆಗಿದೆ. ಅಲ್ಲದೆ ಏಪ್ರಿಲ್ ಮೇ ತಿಂಗಳಿನಲ್ಲಿ ಪರೀಕ್ಷೆ-2 ನಡೆಸಲಾಗಿದ್ದು, 6,788 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿದ್ದು, ಈ ಪೈಕಿ 1,625 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶೇ.23.09 ಫಲಿತಾಂಶವನ್ನು ಪಡೆಯಲಾಯಿತು ಎಂದು ಇದೆ ವೇಳೆ ಅವರು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಡಾ.ಸೋಮಶೇಖರಪ್ಪ ಹೊಕ್ರಾಣಿ, ಮಾನ್ವಿ ಸರ್ಕಾರಿ ಬಾಲಕರ ಪಿಯು ಕಾಲೇಜಿನ ಪ್ರಾಂಶುಪಾಲರಾದ ಡಾ.ಕುಂಟಪ್ಪ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿ ಸುಧಾ ಎಂ.ಎಂ. ಸೇರಿದಂತೆ ಇತರರು ಇದ್ದರು.

# ಸಿಡಿಲು ಬಡಿದು ಮಹಿಳೆ ಸಾವು ಶಾಸಕ ಕರೆಮ್ಮ ಜಿ. ನಾಯಕರಿಂದ 5 ಲಕ್ಷ ಪರಿಹಾರ ವಿತರಣೆ



ಜನವಾದಿ ವಾರ್ತೆ

ಜಾಲಹಳ್ಳಿ ಮೇ 22- ಸಮಿಪದ ಲಿಂಗದಹಳ್ಳಿ ಗ್ರಾಮದ ಯಲ್ಲಮ್ಮ ಗಂಡ ಶಿವಪ್ಪ ಮ್ಯಾಗೇರಿ ಎಂಬ ಮಹಿಳೆ ಮಂಗಳವಾರ ಸಂಜೆ ಸಿಡಿಲು ಹೊಡೆತಕ್ಕೆ ಮೃತಪಟ್ಟಿದ್ದಾರೆ.

ಬುಧುವಾರ ದೇವದುರ್ಗ ವಿಧಾನಸಭಾ ಕ್ಷೇತ್ರದ ಶಾಸಕಿ ಕರಿಯಮ್ಮ ಜಿ ನಾಯಕ ಭೇಟಿ ನೀಡಿ ಮೃತ ದೇವಕಿ ಮಗಳಿಗೆ ಸರಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸರಕಾರದಿಂದ ಪ್ರಕೃತಿ ವಿಕೋಪದಡಿ 5 ಲಕ್ಷ ರೂ ಪರಿಹಾರ ಚಕ್ ನೀಡಿ ವ್ಯಯಕ್ತಿಕವಾಗಿ 20 ಸಾವಿರ ಕೊಟ್ಟು ಮೃತ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ ಚನ್ನಮಲ್ಲಟ ಘಂಟಿ, ವೈದ್ಯಾಧಿಕಾರಿ ಆರ್ ಎಸ್ ಹುಲಿಮನಿಗೌಡ, ಮುಖಂಡರಾದ ಸಿದ್ದನಗೌಡ ಮೂಡಲಗುಂಡ, ನಾಗಪ್ಪ ಪಾಮರತಿ, ಭೀಮಣ್ಣ ಗುತ್ತಿಗೆದಾರ, ಗೋವಿಂದರಾಜ್ ನಾಯಕ ತಿಂಪೂರ, ಗೋವಿಂದರಾಜ್ ಕೊತ್ತದೊಡ್ಡಿ, ಹುಸೇನಪ್ಪ ಗುತ್ತೆದಾರ, ಗುರುರಾಜ್ ತೋಟದ್, ಶಿವನಗೌಡ ವಂದ್ಲಿ, ರಂಗನಾಥ ಪ್ಯಾಪ್ಲಿ, ಸೇ- ರಿದಂತೆ ಅನೇಕರು ಸೇರಿದ್ದರು.

# ಮೇ 24,25 ಕ್ಕೆ ಹೈದ್ರಾಬಾದ್ ಕರ್ನಾಟಕ ಜನಾಂದೋಲನ ಸಮಿತಿಯಿಂದ ಚಿಂತನ- ಮಂಥನ ಕಾರ್ಯಕ್ರಮ




ಜನವಾದಿ ವಾರ್ತೆ

ರಾಯಚೂರು ಮೇ 22- ಹೈದರಾಬಾದ್ - ಕರ್ನಾಟಕ ಜನಾಂದೋಲನ ಸಮಿತಿಯಿಂದ ಮೇ.24, 25 ರಂದು ವರ್ತಮಾನ ಸಂದರ್ಭದಲ್ಲಿ ರಾಜಕಾರಣ ತತ್ವ ಸಿದ್ಧಾಂತಗಳ ಚಿಂತನ ಮಂಥನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಜಿಲ್ಲಾಧ್ಯಕ್ಷ ಬಿ. ಬಸವರಾಜ ತಿಳಿಸಿದರು.

ಅವರಿಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದವರು, ಈ ಕಾರ್ಯಕ್ರಮವು ನಗರದ ಕೃಷಿ ವಿಶ್ವವಿದ್ಯಾಲಯದ ಕೆವಿಕೆ ಸಭಾಂಗಣದಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ವಿವಿಧ ವಿಷಯಗಳ ಕುರಿತು ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ನಾಡಿನ ಹೆಸರಾಂತ ಚಿಂತಕ ದಿಲೀಪ್ ಕಾಮತ್, ಶಿವಸುಂದರ, ಡಾ ಕೆ ಪ್ರಕಾಶ್, ಶಿಕ್ಷಣ ತಜ್ಞರಾದ ಚೇಗರೆಡ್ಡಿ ಹೋರಾಟಗಾರರಾದ ರವಿ ಕೃಷ್ಣರೆಡ್ಡಿ ಮತ್ತು ಕೆ. ಪಿ ಭಟ್ ಮುಂತಾದವರು ಭಾಗವಹಿಸಲಿದ್ದಾರೆ ಎಂದರು.

ಡಾ.ಚಂದ್ರಗಿರೀಶ, ಚಾಮರಸ ಮಾಲಿ ಪಾಟೀಲ್, ಶ್ಯಾಮಲ ಪೂಜಾರ ಕಲಾಲ್ ಬಂಡಿ, ವೀರ ಹನುಮಾನ, ಪತ್ರಕರ್ತರಾದ ರಾಮಕೃಷ್ಣ ದಾಸರಿ, ದತ್ತು ಸರ್ಕಲ್, ಶಿವಪ್ಪ ಮಡಿವಾಳ, ಮಂಜುನಾಥ ಸಾಲಿ, ಗೌಡಪ್ಪಗೌಡ ಮುಂತಾ ದವರು ಸಂವಾದದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಡಾ. ಶಾರದ ಹುಲಿ ನಾಯಕ್, ಲಿಂಗಪ್ಪ ಪೂಜಾರಿ, ಖಾಜಾ ಅಸ್ಲಾಂ ಪಾಷಾ, ಜಾನ್ ವೆಸ್ಲಿ, ಈರಣ್ಣ ಭಂಡಾರಿ, ಲಕ್ಷ್ಮಣ, ಬೂದೆಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.'

# ಮೇ.25ರಂದು ರವಿವಾರ ಶ್ರೀಮಹಾರಾಣ ಪ್ರತಾಪ ಜಯಂತಿ, ಪ್ರತಿಭಾ ಪುರಸ್ಕಾರ

ಜನವಾದಿ ವಾರ್ತೆ



ರಾಯಚೂರು ಮೇ 22- ರಾಯಚೂರು ಜಿಲ್ಲಾ ರಾಜಪೂತ ಸಮಾಜದ ವತಿಯಂದ ಮೇ 25ರಂದು ರವಿವಾರ ಶ್ರೀಮಾಹಾರಾಣ ಪ್ರತಾಪ ಸಿಂಹಾಜೀ ಯವರ 485ನೇ ಯ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಅಧ್ಯಕ್ಷ ಮನೋಹರಸಿಂಗ ತಿಳಿಸಿದ್ದಾರೆ.

ಪ್ರತಿ ವರ್ಷದಂದತೆ ಈ ವರ್ಷವೂ ನಡೆಯುವ ಈ ಜಯಂತಿ ಕಾರ್ಯಕ್ರಮ ಸಣ್ಣ ನೀರಾವರಿ ಮತ್ತು ವಿಜ್ಞಾನ ತಂತ್ರಜ್ಞಾನ ಸಚಿವ ಎನ್. ಎಸ್. ಭೋಸರಾಜ ಸಂಜೆ ಅಂದು 7ಗಂಟೆಗೆ ಉದ್ಘಾಟನೆ ಮಾಡಲಿದ್ದಾರೆ.

ಮುಖ್ಯತಿಥಿಗಳಾಗಿ ಲೋಕಸಭಾ ಸದಸ್ಯರಾದ ಜಿ.ಕುಮಾರನಾಯಕ, ಶಾಸಕ ಡಾ.ಶಿವರಾಜ ಪಾಟೀಲ ವಿಧಾನ ಪರಿಷತ್ ಸದಸ್ಯ ಎ.ವಸಂತ್ ಕುಮಾರ್, ಪಾಲಿಕೆ ಮೇಮರ ನರಸಮ್ಮ ಮಾಡಿಗಿರಿ, ಪಾಲಿಕೆ ಸದಸ್ಯ ಎನ್. ಶ್ರೀನಿವಾಸ್ ರೆಡ್ಡಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಈ ಸಮಾರಂಭದಲ್ಲಿ ಎಸ್.ಎಸ್. ಎಲ್.ಸಿ ಮತ್ತು ಪಿ.ಯು.ಸಿ ಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಲಾಗುವುದು ಎಂದು ಹೇಳಿದ್ದಾರೆ.

ಇದಕ್ಕೂ ಮುನ್ನಾ ನಗರದ ಮಾವಿನಕೆರೆ ಬಳಿ ಇರುವ ಶ್ರೀ ಮಾಹಾರಾಣಾ ಪ್ರತಾಪ ಸಿಂಹಾಜೀಯರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅಲ್ಲಿಂದ ಸಂಜೇ 4ಗಂಟೆಗೆ ಶೊಭಾ ಯಾತ್ರೆ ಆರಂಭವಾಗಿ ನಗರದ ತೀನ್ ಕಂದೀಲ ಮೂಲಕ ಸಮಾರಂಬದ ನಡೆಯುವನ ಸ್ಥಳ ಗದ್ವಾಲ್ ರಸ್ತೆಗೆ ಇರುವ ರಾಜಪೂತ ಸಮಾಜದ ಆವರಣ ಉದಾಸಿ ಮಠಕ್ಕೆ ತಲುಪಲಿದೆ ಎಂದು ತಿಳಿಸಿದ್ದಾರೆ.

ಈ ಕಾರ್ಯಕ್ರಮಕ್ಕೆ ಅಧ್ಯಕ್ಷತೆ ಜಿಲ್ಲಾ ಅಧ್ಯಕ್ಷ ಮನೋಹರ ಸಿಂಹ ವಹಿಸಲಿದ್ದೂ ಸಮಾಜದ ಭಾಂದವರು ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಸಂಘದ ಪ್ರಧಾನಾ ಕಾರ್ಯದರ್ಶಿ ಗೌತಮ ಶುಕ್ಲಾಮನವಿ ಮಾಡಿದ್ದಾರೆ.

## ಸುಗಮವಾಗಿ ನಡೆಸಲು ಅಪರ ಜಿಲ್ಲಾಧಿಕಾರಿಗಳ ಸೂಚನೆ

ಮಾನವಿ 09, ರಾಯಚೂರು 16 ಹಾಗೂ ಸಿಂಧನೂರು 07 ಸೇರಿದಂತೆ ಒಟ್ಟು 51 ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಬಿ.ಬಡಿಗೇರ ಅವರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು, ತಾಲೂಕು ನೋಡಲ್ ಅಧಿಕಾರಿಗಳು, ಜಿಲ್ಲೆಯ ಎಲ್ಲಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು ಹಾಗೂ ಅಭಿರಕ್ಷಕರು ಸೇರಿದಂತೆ ಇತರರು ಇದ್ದರು.

## ಕುರಿತ ಚರ್ಚೆ ಅಪೂರ್ಣವಾಗಿದೆ: ಹೆಚ್.ಕೆ.ಪಾಟೀಲ್

ವ್ಯಾಪ್ತಿಯಲ್ಲಿ ವಿರಿಜಾ ಅಣೆಕಟ್ಟು ನಾಲೆಯ ಹಾರೋಹಳ್ಳಿ ಪಿಕಪ್ ನಾಲೆ ಹಾಗೂ ರಾಜಪರಮೇಶ್ವರಿ ನಾಲೆಯ ಬಂಡಿಬಚ್ಚಲು ಶಾಖಾ ನಾಲೆಯ ಆಧುನೀಕರಣ ಕಾಮಗಾರಿಯನ್ನು 45 ಕೋಟಿ ರೂ.ಗಳ ಅಂದಾಜು ಮೊತದಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ. ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕಿನ ಬನ್ನೂರು ಪಟ್ಟಣ ಬಳಿ ಕಾವೇರಿ ನದಿಯಿಂದ ನೀರೆತ್ತಿ ಹಾರೋಹಳ್ಳಿ ಮೇಲ್ಮಟ್ಟದ ನಾಲೆ ಹಾಗೂ ಕೆಳಮಟ್ಟದ ನಾಲೆಯ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸುವ ಕಾಮಗಾರಿಯನ್ನು 49.50 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕಿನ ಚಿಕ್ಕಂಕನಹಳ್ಳಿ ಕೆರೆಯ ಮೆಗ್ಗಾಲುವೆ ಮತ್ತು ಕಿಗ್ಗಾಲುವೆಗಳ ಆಧುನೀಕರಣ ಕಾಮಗಾರಿಯನ್ನು 34.65 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ರಾಮನಗರ ಜಿಲ್ಲೆ, ಕನಕಪುರ ನಗರ ವ್ಯಾಪ್ತಿಯಲ್ಲಿನ ಅರ್ಕಾವತಿ ನದಿ ದಂಡ ಅಭಿವೃದ್ಧಿ ಯೋಜನೆಯಡಿ ಅರ್ಕಾವತಿ ಜಲಾಶಯ ಯೋಜನೆಯ ಕಾಮಗಾರಿಯನ್ನು 120 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ದೊರೆತಿದೆ.

## ರಸ್ತೆಗೆ ಲಾರಿ ನಿಲ್ಲಿಸಿ ಪ್ರತಿಭಟನೆ

ವಾಪಾಸ್ಸು ಕಳುಹಿಸಿದ್ದು, ರೈತರ ಆಕ್ರೋಶಕ್ಕೆ ಕಾರಣವಾಗಿದೆ.

ಮುಂಗಾರು ಹಾಗೂ ಹಿಂಗಾರು ಹಂಗಾಮಿನ ಸಂಪೂರ್ಣ ಜೋಳವನ್ನು ಖರೀದಿಸಿಬೇಕು. ಖರೀದಿ ಆದ ಜೋಳವನ್ನು ವಾಪಾಸ್ಸು ಕಳುಹಿಸಿದ ಗ್ರೇಡರ್‌ಗಳ ಮೇಲೆ ಕ್ರಮ ಆಗಬೇಕೆಂದು ರೈತರು ತಹಸೀಲ್ದಾರ ಶೃತಿ ಕೆ. ಅವರಿಗೆ ಆಗ್ರಹಿಸಿದರು. ರೈತರೊಂದಿಗೆ ಮಾತುಕತೆ ನಡೆಸಿ ತಹಸೀಲ್ದಾರ ಶೃತಿ ಹಿರಿಯ ಅಧಿಕಾರಿಗಳೊಂದಿಗೆ ಈ ಬಗ್ಗೆ ಚರ್ಚಿಸುವುದಾಗಿ ಭರವಸೆ ನೀಡಿದಾಗ್ಯೂ ಪಟ್ಟು ಬಿಡದ ರೈತರು ಪ್ರತಿಭಟನೆ ಮುಂದುವರೆಸಿದ್ದಾರೆ.

ರೈತರ ಹೋರಾಟಕ್ಕೆ ಬಿಜೆಪಿ ಮುಖಂಡ ಕೆ.ಕರಿಯಪ್ಪ ಬೆಂಬಲ ಸೂಚಿಸಿ ರೈತರು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. ರೈತ ಮುಖಂಡ ಅಮೀನ್ ಪಾಷಾ ದಿದ್ದಗಿ ಸೇರಿದಂತೆ ನೂರಾರು ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಉದ್ಘಾಟನೆಯಾದರು ಜನರಿಗೆ ಸಿಗದ ಆಹಾರ

ಬಸವರಾಜ ಹೂನೂರು



ಮುದಗಲ್ ಮೇ 22- ಪಟ್ಟಣದ ರಾಯಚೂರು -ಬಾಗಲಕೋಟ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾದ ಇಂದಿರಾ ಕ್ಯಾಂಟೀನ್ ಉದ್ಘಾಟನೆಯಾಗಿ ಒಂದು ವಾರ ಕಳೆಯುತ್ತ ಬಂದರು ಕಡಿಮೆ ದರದಲ್ಲಿ ಜನರಿಗೆ ಮಾತ್ರ ಆಹಾರ ಸಿಗುತ್ತಿಲ್ಲ

ಸರ್ಕಾರ ಬಡವರಿಗಾಗಿ ಹಲವಾರು ಯೋಜನೆ ಘೋಷಣೆ ಮಾಡಿ ಅನುಷ್ಠಾನಕ್ಕೆ ತಂದಿದ್ದು, ಅದರಲ್ಲಿ ಇಂದಿರಾ ಕ್ಯಾಂಟೀನ್ ಕೂಡಾ ಒಂದು, ಈ ಯೋಜನೆ 2013 ರಿಂದ 2018 ರವರೆಗೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರವೇ ಘೋಷಣೆ ಮಾಡಿತ್ತು,ಇದೆ ರೀತಿ ಕಳೆದ ವಾರ ಮುದಗಲ್ ಪಟ್ಟಣದಲ್ಲಿ ನಿರ್ಮಾಣದ ಇಂದಿರಾ ಕ್ಯಾಂಟೀನ್ ಕಟ್ಟಡವನ್ನು ಲಿಂಗಸುಗೂರು ಶಾಸಕ ಮಾನಪ್ಪಡಿ, ವಜ್ಜಲ್ ಹಾಗೂ ಪುರಸಭೆ ಅಧ್ಯಕ್ಷೆ ಮಹಾದೇವಮ್ಮ ಗುತ್ತೇದಾರ ನೇತೃತ್ವದಲ್ಲಿ ಅದ್ದೂರಿಯಾಗಿ ಕಾರ್ಯಕ್ರಮ ಮಾಡುವ ಮೂಲಕ ಉದ್ಘಾಟನೆ ಮಾಡಲಾಗಿತು ಆದರೆ ಒಂದು ವಾರ ಕಳೆಯುತ್ತ ಬಂದರು ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶದ ಜನರಿಗೆ ಕಡಿಮೆ ದರದಲ್ಲಿದಲ್ಲಿ ಉಪಹಾರ, ಊಟ ಸಿಗದಿರುವುದು ಬೇಸರದ ಸಂಗತಿಯಾಗಿದೆ.

ಪಶು ಆಸ್ಪತ್ರೆ ಹಾಗೂ ಸಮುದಾಯದ ಆರೋಗ್ಯ ಕೇಂದ್ರಕ್ಕೆ ಬರುವ ರೋಗಿಗಳಿಗೆ ಮತ್ತು ಸಂಬಂಧಿಕರಿಗೆ , ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕೂಲಿ ಕಾರ್ಮಿಕರಿಗೆ,ರೈತರಿಗೆ ಜೆಸ್ಕಾಂ ಇಲಾಖೆಗೆ ಬರುವ ಸಾರ್ವಜನಿಕರಿಗೆ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ, ಗ್ರಾಮೀಣ ಪ್ರದೇಶದಿಂದ ಆಗಮಿಸುವ ಪ್ರಯಾಣಿಕರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಪಟ್ಟಣದ ಪಶು ಆಸ್ಪತ್ರೆಯ ಆವರಣದ ಮುಂದೆ ಇಂದಿರಾ ಕ್ಯಾಂಟೀನ್ ಸ್ಥಾಪನೆ ಮಾಡಿದ್ದಾರೆ ಆದರೆ ಗುತ್ತಿಗೆದಾರನ ನಿರ್ಲಕ್ಷದಿಂದ ಕಡಿಮೆ ದರದಲ್ಲಿ ಊಟ ಸಿಗದೇ ಹಿನ್ನೆಲೆಯಲ್ಲಿ ಹೆಚ್ಚಿನ ಹಣ ಖಾಸಗಿ ಹೋಟೆಲ್ಗಳಲ್ಲಿ ಉಪಹಾರ ಸೇವಿಸುವ ಅಂತ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಾರ್ವಜನಿಕರು ದೂರಿದರು

ಈಗಲಾದರೂ ಸಂಬಂಧಪಟ್ಟ ಪುರಸಭೆ ಮುಖ್ಯಾಧಿಕಾರಿ ಗಮನಹರಿಸಿ ನೂತನ ಇಂದಿರಾ ಕ್ಯಾಂಟೀನ್ ಪ್ರಾರಂಭ ಮಾಡಿ ಕಡಿಮೆ ದರದಲ್ಲಿ ಉಪಹಾರ ಮಾಡುತ್ತಾರೆ ಕಾದು ನೀಡಬೇಕು.



ಗುತ್ತಿಗೆದಾರನ ಜೊತೆ ಮಾತನಾಡಿ ಇಂದಿರಾ ಕ್ಯಾಂಟೀನ್ ನಲ್ಲಿ ಸಾರ್ವಜನಿಕ ಕಡಿಮೆ ದರದಲ್ಲಿ ಉಪಹಾರ ಸಿಗುವಂತೆ ಕ್ರಮ ಕೈಗೊಳ್ಳಲಾಗುವುದು
-ಪ್ರವೀಣ ಬೋಗಾರ ಪುರಸಭೆ ಮುಖ್ಯಾಧಿಕಾರಿ ಮುದಗಲ್

# ಕನ್ನಡ ಅಭಿಮಾನಿಗಳಿಗೆ ಜೂ.1 ರಂದು ಕಾರ್ಯಕರ್ತರ ಶಿಬಿರ ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿಕೊಳ್ಳಲು ಅಶೋಕ್ ಜೈನ್ ಮನವಿ

ಜನವಾದಿ ವಾರ್ತೆ



ರಾಯಚೂರು ಮೇ 22- ಕನ್ನಡ ಅಭಿಮಾನಿಗಳಲ್ಲಿ ಭಾಷಾಪ್ರೇಮವನ್ನು ಮೈಗೂಡಿಸಲು ಕನ್ನಡ ಮಿತ್ರ ಕೂಟ ಜೂ.1 ರಂದು ಕನ್ನಡ ಕಾರ್ಯಕರ್ತರ ಶಿಬಿರವನ್ನು ನಗರದ ಕನ್ನಡ ಭವನದಲ್ಲಿ ಆಯೋಜಿಸಲಾಗಿದೆ ಎಂದು ಕೂಟದ ಅಧ್ಯಕ್ಷ ಅಶೋಕಕುಮಾರ ಜೈನ್ ಹೇಳಿದರು.

ಅವರಿಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದವರು, ಜೂ.1 ರಂದು ಕನ್ನಡಭವನದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ವರೆಗೆ ಕಾರ್ಯಕರ್ತರ ಶಿಬಿರ ನಡೆಯಲಿದೆ. ಅನೇಕ ಭಾಷಾತಜ್ಞರು, ಅಭಿಮಾನಿಗಳು ಶಿಬಿರದಲ್ಲಿ ಭಾಗಿಯಾಗಲಿದ್ದಾರೆ. ಶಿಬಿರದಲ್ಲಿ ಭಾಗವಹಿಸಲು ಇಚ್ಚಿಸುವವರು ಯಾವುದೇ ವಯೋಮಾನದ ನಿರ್ಭಂದವಿಲ್ಲ. ಕನ್ನಡ ಅಭಿಮಾನಿಗಳು, ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಗಡಿಯಾಚೆನ ಕನ್ನಡಿಗರು ಭಾಗವಹಿಸಬಹುದಾಗಿದೆ.

ಕನ್ನಡದ ಕಳಕಳಿ ಉಳ್ಳುವವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಗ್ರಾಮೀಣದ ಪ್ರದೇಶದ ಕನ್ನಡಿಗರು ಆಗಮಿಸಿ ಭಾಷೆ ಕುರಿತು ಚರ್ಚೆಯಲ್ಲಿ ಭಾಗಿಯಾಗಬೇಕಿದೆ. ಶಿಬಿರದಲ್ಲಿ ಭಾಗವಹಿಸುವವರು ರಾಮಣ್ಣ ಮ್ಯಾದರ(8453770157 ಅಥವಾ ರಾಮಲಿಂಗಪ್ಪ ಕುಣಸಿ ( 9448910398) ಇವರನ್ನು ಸಂಪರ್ಕಿಸಿ ಮೇ.29 ರೊಳಗೆ ನೋಂದಣಿ ಮಾಡಿಕೊಳ್ಳಬೇಕೆಂದರು. ಈ ಸಂದರ್ಭದಲ್ಲಿ ಬಶೀರ ಅಹ್ಮದ್ ಹೊಸಮನಿ, ರಫೀಕ್ ಅಹ್ಮದ್, ರಾಮಲಿಂಗಪ್ಪ ಕುಣಸಿ, ರಾಮಣ್ಣ ಮ್ಯಾದರ ಉಪಸ್ಥಿತರಿದ್ದರು.

Printed by , Published by, Owned by : basavaraj H , Printed and Published at Basavashree Printers and Publishers, H.No.1-11-54/32, Prashanth Colony, RAICHUR-584101. Editor. BASAVARAJ H